# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE    Vol XXI - 8    ಆಗಸ್ಟ್ 2003

### ಈ ಸಂಚಿಕೆಯಲ್ಲಿ


ಅಸೋಸಿಯೇಶನ್‌ನಲ್ಲಿ :

ತಿಂಗಳ ನಾಟಕವಾಚನ "ಜಗನ್ನಾಥ ವಿಠ್ಠಲ" — 2

Forthcoming Programmes — 2-3

ಜೀವ ಧ್ವನಿ • ಪ್ರೊ. ವಸಂತ ಕುಷ್ಟಗಿ — 4

ನಮನ :

ಎಂ. ಆರ್. ಪೈ — 6

ಭಾರತೀಯ ಕಲೆ - ಭಾಗ 17 — 8

ಕೃಪೆ : ಎನ್. ಮಣಿಕಾಮಾಚಾರ್‌ರವರ ಭಾರತೀಯ ಕಲೆ

Values that make life meaningful • *M.A.N. Prasad* — 9

ಸುತ್ತ-ಮುತ್ತ — 10


**Rs. 5/-**


The Mysore Association, Mumbai

393, Bhaudaji Road, Matunga, Mumbai-400 019.

Tel.: 402 46 47 • Grams: "KARUNADU"

ಅಸೋಸಿಯೇಶನ್‌ನಲ್ಲಿ

## ತಿಂಗಳ ನಾಟಕವಾಚನ - "ಜಗನ್ನಾಥ ವಿಠ್ಠಲ"

ಕರ್ನಾಟಕದ ಹರಿದಾಸ ಪರಂಪರೆ ವಿಶಿಷ್ಟವಾದದ್ದು. ಶ್ರೀ ವಾದಿರಾಜರು, ಪುರಂದರದಾಸರು, ಕನಕದಾಸರು ಮುಂತಾಗಿ ಅನೇಕ ಹರಿದಾಸರು ಹೆಸರುವಾಸಿಯಾಗಿದ್ದಾರೆ. ಇವರೆಲ್ಲರೂ ಮಧ್ವಮತ ಪ್ರಚಾರ ಮಾಡಿದಕ್ಕಿಂತಲೂ ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರ. ಭಕ್ತಿ ಪರಂಪರೆಯ ಮಾರ್ಗದಲ್ಲಿ ನಡೆದು ಬಂದ ಹರಿದಾಸರ ಕೃತಿಗಳು ಅತ್ಯಂತ ಮಹತ್ವಪೂರ್ಣ ರಚನೆಗಳಾಗಿವೆ. ಅವರ ಜೀವನ ಚರಿತ್ರೆಯೂ ಅಷ್ಟೇ ವಿಲಕ್ಷಣವೂ ಚಮತ್ಕಾರಿಕವೂ ಆಗಿದೆ. ಈ ಪರಂಪರೆಯಲ್ಲಿ ಹೆಸರುವಾಸಿಯಾದ ''ಜಗನ್ನಾಥ ವಿಠ್ಠಲ'' 'ಜಗನ್ನಾಥ ದಾಸರ' ಜೀವನ ಚರಿತ್ರೆಯನ್ನು ಆಧರಿಸಿ ಬರೆದ ನಾಟಕವೇ ಜಗನ್ನಾಥ ವಿಠಲ ನಾಟಕಕಾರರಾದ ಡಾ. ಕೇಶವ ಮುತಾಲಿಕರು ತಮ್ಮ ಜೀವನದ ಕೆಲವು ಘಟನೆಗಳಿಂದ ಪ್ರೇರಿತರಾದ ಜಗನ್ನಾಥದಾಸರ ಚರಿತ್ರೆಯನ್ನು ಅಭ್ಯಸಿಸಿ ಅವರ ಹುಟ್ಟೂರನ್ನೂ ಸಂದರ್ಶಿಸಿ ಈ ನಾಟಕವನ್ನು ಬರೆದುದಾಗಿ ತಿಳಿಸಿದರು. ಜುಲೈ 28ರಂದು ಥಾಣೆಯ ಕಲಾ ಮಾಧ್ಯಮ ತಂಡದವರು ಈ ನಾಟಕವನ್ನು ಮೈಸೂರು ಅಸೋಸಿಯೇಶನ್‌ನ ಸಭಾಗೃಹದಲ್ಲಿ ಸಂಗೀತ ಗಾಯನದೊಡನೆ ಓದಿ ತೋರಿಸಿದರು.

ನಾಟಕದಲ್ಲಿ ಮೂರು ಅಂಕಗಳಿದ್ದು ಒಂದೊಂದು ಅಂಕದಲ್ಲಿಯೂ ಪಾತ್ರ ವಿಂಗಡನೆ ಮಾಡಲಾಗಿದೆ. ನಾಟಕ ಜಗನ್ನಾಥ ದಾಸರ ಜೀವನ ವೃತ್ತಾಂತವಾದರೂ ಇಬ್ಬರು ಶಿಷ್ಯರ ಪಾತ್ರ ವಿಶೇಷವಾಗಿದೆ. ಶಾಸ್ತ್ರೋಕ್ತ ವಿದ್ಯಾಭ್ಯಾಸದಿಂದ ಪಾಂಡಿತ್ಯ ಪೂರ್ಣರಾದ ಶ್ರೀನಿವಾಸಾಚಾರ್ಯರು ಜನಗ್ನಾಥ'ದಾಸರೆಂಬ ಹರಿದಾಸರಾಗಿ ''ಹರಿಕಥಾಮೃತ ಸಾರ''ವೆಂಬ ಕೃತಿ ರಚನೆ ಮಾಡುವಲ್ಲಿ ನಾಟಕ ಪೂರ್ಣವಾಗುತ್ತದೆ. ಈ ಮಧ್ಯೆ ಅವರ ಜೀವನದಲ್ಲಿ ನಡೆದ ಕೆಲವು ಚಮತ್ಕಾರಿಕ ಘಟನೆಗಳ ಉಲ್ಲೇಖವಾಗುತ್ತದೆ.

ನಾಟಕವಾಚನದ ನಂತರ ನಡೆದ ಚರ್ಚೆಯಲ್ಲಿ ವಿದಿತವಾದ ಮುಖ್ಯ ಅಂಕವೆಂದರೆ ಹರಿದಾಸರ ಜೀವನ, ಕೃತಿಗಳೆರಡೂ ಭಕ್ತಿ ಪ್ರಧಾನವಾದದ್ದು, ಆದರೆ ಈ ನಾಟಕ ವಾಚನದಲ್ಲಿ ಭಕ್ತಿಭಾವದ ಕೊರತೆ ಎದ್ದು ಕಾಣುತ್ತಿತ್ತು. ಜಗನ್ನಾಥದಾಸರ ಪಾತ್ರ ಪ್ರಾಧಾನ್ಯತೆಯನ್ನು ಪಡೆಯದೆ ಶಿಷ್ಯರ ಪಾತ್ರವೇ ಹೆಚ್ಚು ಭಾಗವನ್ನು ಆಕ್ರಮಿಸಿದೆ. ಸಂಗೀತ, ಗಾಯನಗಳೆರಡೂ ಹಿನ್ನೆಲೆಯಲ್ಲಿದ್ದು ಅಷ್ಟು ಪರಿಣಾಮವನ್ನು ಬೀರುವುದಿಲ್ಲ ಎಂಬುದು ಬಹುಶಃ ನಾಟಕಕಾರರು ಇದನ್ನು ರಂಗದ ಮೇಲೆ ಆಡಿತೋರಿಸುವ ಸಂದರ್ಭದಲ್ಲಿ ನಟರ

# THE MYSORE ASSOCIATION, BOMBAY

## FORTH COMING PROGRAMMES

| Date | Programme | | Time | Venue |
|---|---|---|---|---|
| 15.08.03 | Independence Day - Flag Hoisting | | 10.00 a.m. | Ground Floor |
| | **THE MYSORE ASSOCIATION & KARNATAKA SHILPAKALA ACADEMY** Present **SCULPTURE WORKSHOP** | | | |
| 19.08.03 to 22.08.03 | - Live Demonstration by eminent artists from Karnataka | | 5.00 p.m. to 8.00 p.m. | Ground Floor |
| 23.08.03 | - Valedictory Function | | 6.30 p.m. | Ground Floor |
| 18.08.03 | Screening of Kannada Feature film 'Sparsha' | | 7.00 p.m. | Auditorium |
| 28.08.03 | Play Reading<br>Jayadev Theatres will read the Kannada play "Kaliyuga Bandaithe Noda" written by Shri. Avinash Kamath | | 7.00 p.m. | Auditorium |
| 30.08.03 | **COMMENCEMENT OF SHRI SWARNA GOWRI & SHRI MAHAGANAPATHI POOJA - 2003** | | | |
| | - Shri Swarna Gowri Pooja | | 10.30 a.m. | Ground Floor |
| 31.08.03 | - Shri. Mahaganapathi prathishtapane & pooja | | 10.30 a.m. | Ground Floor |
| | - Mahamangalarathi | | 8.00 p.m. | |
| 1.09.03 | - Shri Swarna Gowri & Shri Mahaganapathi pooja | | 9.00 a.m. | Ground Floor |
| | **COMMENCEMENT OF MUSIC FESTIVAL OF YOUNG & UPCOMING ARTISTS** | | | |
| | Kum. Poornima Muralidharan | - Carnatic - Vocal | 7.00 p.m. | Conf. Hall |
| | Kum. ~~Smita~~ Smrithi Sundararajan | - Violin | | |
| | Kum. Poornima Krishna | - Mridangam | | |
| | - Pooja & Mahamangalarathi | | 9.00 p.m. | Ground floor |
| 2.09.03 | - Shri Swarna Gowri & Shri Mahaganapathi pooja | | 9.00 a.m. | Ground floor |
| | **MUSIC FESTIVAL OF YOUNG & UPCOMING ARTISTS** | | | |
| | Kum. Archana Bennur | -Carnatic Vocal | 7.00 p.m. | Conf. Hall |
| | Shri. L. Ramakrishnan | - Violin | | |
| | Shri. Rohit Prasad | - Mridangam | | |
| | - Pooja & Mahamangalarathi | | 9.00 p.m. | Ground floor |
| 3.09.03 | - Shri Swarna Gowri & Shri Mahaganapathi pooja | | 9.00 a.m. | Ground floor |

| Date | | Programme | Time | Venue |
|---|---|---|---|---|
| | | **MUSIC FESTIVAL OF YOUNG & UPCOMING ARTISTS** | | |
| | | Kum. Soumya Raghava Ratna - Carnatic Vocal | 7.00 p.m. | Conf. Hall |
| | | Kum. Savitha Vishwanathan - Violin | | |
| | | Shri.Aditya Rajagopalan - Mridangam | | |
| | - | Pooja & Mahamangalarathi | 9.00 p.m. | Ground floor |
| 4.09.03 | - | Shri Swarna Gowri & Shri Mahaganapathi pooja | 9.00 a.m. | Ground floor |
| | | **MUSIC FESTIVAL OF YOUNG & UPCOMING ARTISTS** | | |
| | | Kum. Savitha Vishwanathan - Carnatic Vocal | 7.00 p.m. | Conf. Hall |
| | | Shri. L. Ramakrishnan - Violin | | |
| | | Shri. Rohit Prasad - Mridangam | | |
| | - | Pooja & Mahamangalarathi | 9.00 p.m. | Ground floor |
| 5.09.03 | - | Shri Swarna Gowri & Shri Mahaganapathi pooja | 9.00 a.m. | Ground floor |
| | | **MUSIC FESTIVAL OF YOUNG & UPCOMING ARTISTS** | | |
| | | Kum. Vaishnavi Rajagopalan - Carnatic Vocal | 7.00 p.m. | Conf. Hall |
| | | Kum. Savitha Vishwanathan - Violin | | |
| | | Shri.Aditya Rajagopalan - Mridangam | | |
| | - | Pooja & Mahamangalarathi | 9.00 p.m. | Ground floor |
| 6.09.03 | - | Shri Swarna Gowri & Shri Mahaganapathi pooja | 9.00 a.m. | Ground floor |
| | | **MUSIC FESTIVAL OF YOUNG & UPCOMING ARTISTS** | | |
| | | Kum. Veena Murthy - Carnatic Vocal | 7.00 p.m. | Conf. Hall |
| | | Kum. Smitha Sundararajan - Violin | | |
| | | Kum. Poornima Krishna - Mridangam | | |
| | - | Pooja & Mahamangalarathi | 9.00 p.m. | Ground floor |
| 7.09.03 | - | Shri Swarna Gowri & Shri Mahaganapathi pooja | 9.00 a.m. | Ground floor |
| | - | Veda Ghosha by Vaidikas of Shankara Matt | 10.00 a.m. | |
| | | **MUSIC FESTIVAL OF YOUNG & UPCOMING ARTISTS** | | |
| | | Devotional Songs by Kum. Ujwala Acharya, with Smt. Sushila Acharya and Party | 11.00 a.m. | Conf. Hall |
| | - | Pooja & Mahamangalarathi | 12.00 noon | Ground floor |
| | - | Procession of Shri Swarna Gowri & Shri Ganapathi to Dadar Beach for immersion | | |
| | - | Prasada Vinayoga | | |

ಅಭಾವವುಂಟಾಗಬಹುದೆಂಬ ಭೀತಿಯಿಂದ ಪಾತ್ರಗಳಲ್ಲಿ ಕಡಿತಮಾಡಿದಂತೆ ತೋರುತ್ತಿದೆ ಎಂದೂ ವ್ಯಕ್ತವಾಗಿತ್ತು. ನಾಟಕವಾಚನ ಕ್ಕಿಂತ ನಾಟಕ ಪ್ರದರ್ಶನವು ಹೆಚ್ಚು ಪರಿಣಾಮಕಾರಿ ಯಾಗಬಹುದೇನೋ ಎನ್ನುವ ಆಶಯವನ್ನು ವ್ಯಕ್ತ ಮಾಡಲಾಯಿತು.

### ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಧನಸಹಾಯ

ಪ್ರತಿ ವರ್ಷದಂತೆ ಅಸೋಸಿಯೇಷನ್ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ನೀಡುವ ಧನಸಹಾಯವನ್ನು ಈ ವರ್ಷವೂ ಮುಂದುವರಿಸಿ ಕೊಂಡು ಬಂದಿದೆ. ಈ ವರ್ಷ ಧಾರಾವಿಯ ಸಂತ ಕಕ್ಕಯ್ಯ ಕನ್ನಡ ಶಾಲೆ ನಂ. ೧ ಮತ್ತು ನಂ. ೨ರ ಬಡವಿದ್ಯಾರ್ಥಿಗಳಿಗೆ ಉಚಿತ ನೋಟ್ಸ್ ಬುಕ್‌ಗಳನ್ನು ವಿತರಿಸಲಾಯಿತು. ಹಾಗೂ ವಡಾಲದ ರಾಷ್ಟ್ರೀಯ ಕನ್ನಡ ಶಾಲೆಯ ಬಡವಿದ್ಯಾರ್ಥಿಗಳಿಗೆ ಸಂಗಣಕ ಯಂತ್ರದ ತರಬೇತಿಗಾಗಿ ಆರ್ಥಿಕ ಸಹಾಯ ನೀಡಲಾಯಿತು ಮತ್ತು ಆಲ್ ಇಂಡಿಯಾ ವಿಮೆನ್ಸ್ ಕಾನ್ಫರೆನ್ಸ್ ಹಮ್ಮಿಕೊಂಡಿರುವ ಬೀದಿ ಮಕ್ಕಳ ಪುನರ್ವಸತಿ ಕಾರ್ಯಕ್ರಮ 'ಶ್ರದ್ಧಾ' ಇದಕ್ಕೂ ಕೂಡ ಧನ ಸಹಾಯ ನೀಡಲಾಯಿತು.

FOR ALL YOUR DOMESTIC AND INTERNATIONAL TRAVEL ARRANGEMENTS

CONTACT

AUGUST TRAVEL SERVICE

Agents For INDIAN AIRLINES & JET AIRLINES

REGD. OFFICE :
3/15, ASHIANA, SECTOR 17,
VASHI, NAVI MUMBAI
PHONES : 2789 1970*2789 1972
2789 2451
GRAMS : AUGTRASERV

ALSO AT :
2/16, KABBUR HOUSE,
SION (E), MUMBAI-400 022.
PHONES : 2407 2984*2409 3573
2407 7750

# ಜೀವ ಧ್ವನಿ

ಪ್ರೊ. ವಸಂತ ಕುಷ್ಟಗಿ

ಶ್ರೀ ಚೆನ್ನವೀರ ಕಣವಿಯವರು ಕನ್ನಡ ಭಾವಗೀತ ಪ್ರಪಂಚದ ಶ್ರೇಷ್ಠ ಕವಿಗಳಲ್ಲಿ ಒಬ್ಬರು. ಅವರ ಕಾವ್ಯೋದ್ಯೋಗವು ನವೋದಯ ಕಾಲದಲ್ಲಿ ಆರಂಭವಾಗಿ ಇಂದಿನ ಕಾಲದ ಎಲ್ಲ ಒಳ್ಳೆಯ ಸತ್ವಗಳಿಗೆ ಅವಕಾಶವನ್ನು ಒದಗಿಸಿಕೊಂಡ ಯಾವ ತೊಡಕುಗಳಿಗೂ ಒಳಗಾಗದ ಒಬ್ಬ ಕವಿ ಎಂದರೆ ಕಣವಿ ಋಗ್ವೇದದ ಒಂದು ಸಂಹಿತೆಯಂತೆ ಜ್ಞಾನವು ಯಾವ ಮೂಲೆಯಿಂದ ಬಂದರೂ ಅದು ನನ್ನದಾಗಲೀ ಎಂಬ ಮಾತು ಕಣವಿಯವರಿಗೆ ಅರ್ಥಪೂರ್ಣವಾಗಿ ಅನ್ವಯಿಸುತ್ತದೆ. ಇತ್ತ ನವ್ಯ, ಅತ್ತ ನವೋದಯ ಕಾಲದ ಲಯಬದ್ಧ ಭಾವವಿಷ್ಟ ಅಭಿವ್ಯಕ್ತಿ ಈ ಎರಡು ದಿಬ್ಬಗಳ ಮಧ್ಯದಲ್ಲಿ ಕಣವಿ ಕಾವ್ಯ ಸರೋವರವಾಗಿ ಎಲ್ಲರಿಗೂ ಬೇಕಾಗಿ ಸುವರ್ಣ ಮಾಧ್ಯಮದ ವ್ಯಕ್ತಿಯಾಗಿದ್ದಾರೆ.

ಈ ಕವಿಗಳು ಬಾಳಿನ ಉದ್ದಕ್ಕೂ ಪ್ರತ್ಯೇಕವಾಗಿ ಜೀವನದ ಅನಂತ ಕೋನಗಳನ್ನು ವೀಕ್ಷಿಸಿ ಸಾಧ್ಯವಾದ ಕಡೆಗಳೆಲ್ಲ ಪರಕಾಯ ಪರೇಶ ಮಾಡಿ ಕಾವ್ಯದ ರಸಗಟ್ಟಿಯ ರುಚಿಯನ್ನು ಉಣಬಡಿಸಿದವರು. ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗದ ನಿರ್ದೇಶಕರಾಗಿದ್ದುಕೊಂಡೂ ವೈವಿಧ್ಯಪೂರ್ಣ ಭಾವಗೀತೆಗಳ ನಿರ್ಮಿತಿಗೆ ಅವಿಷ್ಕಾರವನ್ನು ಪಡೆದಿದ್ದಾರೆ. ಇವರಿಗೆ ಪಂಪ ರನ್ನರು ಬೇಕು, ಹರಿಹರ ರಾಘವಾಂಕರು ಬೇಕು. ಬಸವಾದಿ ಪ್ರಮಥರು ಬೇಕು, ಓಣಿಗೆ ಬಂದ ದಾಸರೂ ತಮ್ಮ ಅತಿಥಿಗಳಾಗಬೇಕು. ಶೆಲ್ಲಿ, ಕೀಟ್ಸ್, ಏಟ್ಸ್ T.S. ಇಲಿಯಟ್‌ರೂ. ಬೇಕಾದಂತೆ ಗೋಕಾಕ, ಬೇಂದ್ರೆ, ಪುಟ್ಟಪ್ಪ ಇವರು ಬೇಕು. ಈ ಸಮನ್ವಯದ ಗಾಳಿಯಲ್ಲಿ ಹಳೆಯದರ ಒಳಿತು ಹೊಸದರ ಒಳಿತು ಎರಡರ ಸಮನ್ವಯ ಪೂರ್ಣ ಗಟ್ಟಿ ಕಣವಿ ಮತ್ತು ಕಣವಿ ಸಾಹಿತ್ಯ.

ಸಾಹಿತ್ಯ ಅಕಾಡೆಮಿಯ ಪುರಸ್ಕಾರವನ್ನು ಪಡೆದ ಅವರ ಕೃತಿಗಳಲ್ಲಿ ಹಲವು ಹತ್ತಾರು ಮುಖಗಳ ವೈವಿಧ್ಯದಿಂದ ಕೂಡಿದ್ದು ಅವರ ಜೀವಧ್ವನಿ. ಈ ಜೀವಧ್ವನಿ ಬರಿಯ ಕವಿಯ ಜೀವಧ್ವನಿಯಾಗದೆ ಸಾಮೂಹಿಕ ಪ್ರಜ್ಞೆಯಿಂದ ಕೂಡಿದ ಮತ್ತು ಸಾರ್ವಕಾಲಿ ಸತ್ಯವನ್ನು ಹೇಳುವ ಜೀವಧ್ವನಿಯಿಂದ ಕೂಡಿ, ಬೇವು ಬೆಲ್ಲ-ಸಿಹಿ ಕಹಿಗಳ ಬದುಕಿನಲ್ಲಿ ಆನಂದದ ಪರಿಮಿತಿಯನ್ನು ಮುಟ್ಟುವ ಎಳೆತ ಇಲ್ಲಿ ಕಂಡು ಬರುತ್ತದೆ. ಕಲುಸು ಮೈಲೋಗರದ ಈ ಪ್ರಪಂಚದಲ್ಲಿ ಆ ಎಳೆತವನ್ನು ಗುರುತಿಸಿಕೊಂಡು ಕಾಲ ಕತ್ತಲೆಯಲ್ಲಿ ತಡವರಿಸಿ ದಾರಿಯನ್ನು ಕಾಣುವ ರೀತಿ ಇಲ್ಲಿ ಪ್ರಪತ್ತಿಯಾಗಿದೆ. ಹೀಗೆ ಹೇಳುವಾಗ ಇಡೀ ಜೀವಧ್ವನಿಯನ್ನು ಕೇವಲ ಸಾಮಾಜಿಕ, ರಾಜಕೀಯ, ಹಿನ್ನಲೆಯ ಸಾಮಾಜಿಕ ಮತ್ತು ತಾತ್ವಿಕ ವಿಚಾರಗಳ ಹಿನ್ನೆಲೆಯ ಪರಿಸರ ಇತ್ಯಾದಿ ಪ್ರಮುಖ ಧ್ವನಿಗಳಲ್ಲಿ ವಿಂಗಡಿಸಬಹುದು.

ಕವಿ ಮೂಲತಃ ವ್ಯಕ್ತಿ ಎಂದರೆ ಅವನು ವಷ್ಟಿ ಅವರಿಂದ ಪ್ರತ್ಯೇಕವಾಗಿ ಸಮಷ್ಟಿಯನ್ನು ವಿವರಿಸಬೇಕು. ಎಷ್ಟೋ ನಿಷ್ಪಕ್ಷಪಾತವಾಗಿ ಸಮಷ್ಟಿಯನ್ನುಚಿತ್ರಿಸಲು ಪ್ರಯತ್ನಿಸಿದರು. ವ್ಯಷ್ಟಿಯ ಒಂದು ಅಂಶ ತನ್ನ ಪ್ರಭಾವವನ್ನು ಬೀರಿರುತ್ತದೆ. ಈ ಹಿನ್ನಲೆಯಲ್ಲಿ ಜೀವಧ್ವನಿ ಸ್ವಾಭಿಮಾನವನ್ನು ಬೆಳೆಸಿಕೊಂಡು ಋಜು ಬದುಕು, ಋಜುವಾತು ಬಿತ್ತಿ ಬೆಳೆಯಬೇಕು ಎಂಬುದು ಇಲ್ಲಿ ಆಶಯವಾಗಿದೆ.

ಸ್ವಾತಂತ್ರ್ಯ ಪೂರ್ವ ಸ್ವಾಭಿಮಾನ, ದೇಶಾಭಿಮಾನ, ಅವುಗಳನ್ನು ರೂಢಿಸಿಕೊಂಡ, ಕವಿಯಚೇತನವು ಸ್ವಾತಂತ್ರ್ಯ ಪಥದಲ್ಲಿ ಒಳಿತನ್ನೆ ಬಾಳಿಸಲು ಯತ್ನಿಸಿದ ಚೇತನವು ವೈಜ್ಞಾನಿಕ ಬೆಳವಣಿಗೆಯಿಂದ ಸಂಕುಚಿತವಾದ ಪ್ರಪಂಚದಲ್ಲಿ ಒಳಿತಿನ ಜೊತೆಗೆ cbidemic (ಎಪಿಡೆಮಿ)ರಾಗಿ ಬಂದಿರುವ ವಾಯುರಸ್ಸುಗಳು ಮಾನವ ಜೀವನವನ್ನು ಹಿಂಡಿ ಹಿಪ್ಪಿ ಮಾಡುತ್ತಿದೆಯಲ್ಲಾ, ಎಂಬ ನೋವು ಇವರ ಅನೇಕ ಕವನಗಳಲ್ಲಿ ಧ್ವನಿತವಾಗಿದೆ. ಅಲ್ಲಾ ಮಾತ್ಕೇಳತೀನಿ, ಇಳಿದ ಬೆಲೆ, ಜೋಳದ ಪಾಳಿ, ಗೋಪುರದ ಗಡಿಯಾರ. ಈ ಮೊದಲಾದ ಕವಿತೆಗಳಲ್ಲಿ ಈ ಭಾವವು ನಿಚ್ಚಳವಾಗಿ ಅಭಿವ್ಯಕ್ತಗೊಂಡಿದೆ. ಸಾವಿರದ ಸತ್ಯವನ್ನು ಬಹಳ ಪ್ರಯತ್ನ ಮಾಡಿ, ಕಂಪು ಹಿಡಿಬೇಕಾದ ಕವಿತೆಯಾದರೆ, ಅಲ್ಲಾ ಮಾತ್ಕೇಳತೀನಿ ಸಂವೇದನೆ ತೀವ್ರತೆಯನ್ನು ಪಳನ್ನನೆ ಮಿಂಚಿಸುವ ಕವಿತೆಯಾಗಿ ನಿಂತಿದೆ. ಅದೇ ಎತ್ತರದ ಕವಿತೆ ಇಳಿದ ಬೆಲೆ ಮತ್ತು ವ(ಂ)ಚನ. ಈ ಕವಿತೆಗಳಲ್ಲಿ ನಾಮಾಂಕಿತ ಪರಿಸರದ ವ್ಯವಹಾರಗಳು ದುರ್ವ್ಯವಹಾರವಾಗಿರುವುದನ್ನು ವಿಡಂಬನಾತ್ಮಕವಾಗಿ ಬರುವುದು ನಿಜವಾಗಿಯೂ ಸಾಹಿತ್ಯ ಮನುಷ್ಯನ ಹೃದಯವನ್ನು ನಿರಂಬಳಗೊಳಿಸಲು ಶಸ್ತ್ರ ಚಿಕಿತ್ಸೆಯನ್ನು ಮಾಡುವ ಶಕ್ತಿ ಎಂಬುದಕ್ಕೆ ಸಾಕ್ಷಿಯಾಗಿವೆ. ''ಒದು ಒಲ್ಯಾನ ಸುಡುರಿ'', ಬಿಳಿ ಟೊಪ್ಪಿಗೆ ನಡುವೆ ಕರೆದೆ ಕಂಡೆ ಕಾಣಸ್ತದೆ ''ಈಗ ಹರಿದಿದ್ದಿತು ಬಿಸಾ ಒಗೆದಿದ್ದಾರೋ ಆಯಿತು'' ಇಂಥ ಮಾತುಗಳಲ್ಲಿ ಇಂದಿನ ಜನತೆ ನಾಟಿಕೆಯನ್ನು ಹೇಗೆ ತಲೆಗೆ ಸುತ್ತಿಗೊಂಡು ಜೋಳದ ಪಾಳಿಗಾಗಿ ಶಿಸ್ತಿನ ಸಿಪಾಯಿಯಾಗದೆ ಬೇಶಿಸ್ತಿನ ತುರಾಯಿಯಾಗಿ ಕಲಬೇಡ ಕುಲಬೇಡದಂತಹ ಮುತ್ತಿನ ವಚನಗಳಿಗೆ ವಂಚನೆಗಳನ್ನು ಮಾಡಿದವರು ನಾವು ಎಂಬ ಸ್ಪಂದ ನಮ್ಮಲ್ಲಿ ತುಡಿಯುವಂತೆ ಈ ಬಗೆಯ ಕವಿತೆಗಳು ಮಾಡುತ್ತವೆ. ಅದೇ ರೀತಿ ಇಳಿದ ಬೆಲೆಯ ಹಾಲತ್ತು ಕೂಡಾ, ನಮ್ಮ ದಾರಿ ಸುಗಮವಾಗುವುದಕ್ಕೆ ಅಂತರಂಗದಲ್ಲಿ Search light ಬಿಡುವ ತೀವ್ರ ಪ್ರಭಾವಿ ಕವಿತೆ. ಇಂಥಹ ಕವಿತೆಗಳಲ್ಲಿ ಪುರುಷ ಪ್ರಯತ್ನದ ಸುಳುಹು ಇದ್ದು ಕೆಡಕು ರಾಜಕೀಯ ಪರಿಸರದಿಂದ ನಿಜವಾದ ಪ್ರಜಾಪ್ರಭುತ್ವದ ಸತ್‌ಪ್ರಜೆಯಾಗಲು ಸಿಡಿದುನಿಂತು ಹೂವು ಹೂಜಿಯಾಗಿ ಹೃದಯ ಸಂವಾದಕ್ಕೆ ಬೇರೆ ಹದವನ್ನು ಕಾಣದೆ ಜೀವನಾದವನ್ನು ಸ್ವಂತ ಬಾವಿಯಿಂದ ಎತ್ತಬೇಕೆಂಬ ಸಂದೇಶವನ್ನು ಪಡೆದಾಗ ಸಹೃದಯ ಚೇತನವು ರೋಮಾಂಚಿತವಾಗುತ್ತದೆ.

ಸಿಡಿದೆದ್ದ ಚೇತನವಾಗಿ ಆರದ ಕಿಡಿಯಾಗಿ ಪರಿಸರದ ಭಾರದಲ್ಲಿ ಪರೋಪಕಾರಿಯಾಗಿ ಬದುಕಲು ಮನುಷ್ಯನು ಕೃತಜ್ಞತೆಯನ್ನು ಅರಿತವನಾಗಿರಬೇಕು. ಇದು ಮಾನವತ್ವೆಯ ಮೂಲಭೂತವಾದ ಅಂಶ. ಇದನ್ನು ಮರೆತನಾದರೆ ಅವನು ಪಶುವಲ್ಲ - ಅವನು ಪಿಶಾಚಿ. ಈ ಹಿನ್ನಲೆಯಲ್ಲಿ ಹೊಲಸು ರಾಜಕೀಯದಿಂದ ಹೊರಗೆ ಬಂದು ನಮ್ಮ ಹಿರಿಯರನ್ನು ತಲೆ ಚಚ್ಚಿಕೊಂಡರೂ ನೆನಪಾಗದ ಮಹಾನುಭಾವರನ್ನು ಹೇಗಾದರೂ ಅಡಿ ನೆನಪಿಸಿಕೊಳ್ಳಬೇಕು. ನಡೆದು ಬಂದ ಹೆಜ್ಜೆಗಳಲ್ಲಿ ಮೂಡಿಬರುವ ಭಾವನೆಗಳಲ್ಲಿ ಹಿಂದಿನ ರವಿ ತೇಜ ಇದ್ದೇ ಇರುತ್ತದೆ. ಅದನ್ನು ಕಂಡುಂಡು ಹೆಜ್ಜೆ ಇಟ್ಟರೆ ನಾವು ಜಾರುವುದಿಲ್ಲ. ಜೀವಧ್ವನಿಯಲ್ಲಿ ಈ ಮುಡುಪು ಇದೆ. ಇದನ್ನು ಬಿಚ್ಚಿ ನೋಡಿ ಅದರ ಮೌಲ್ಯವನ್ನು ರೂಢಿಸಿಕೊಂಡು ನಮ್ಮ ಬದುಕನ್ನು ಹಸನಾಗಿ ಮಾಡಿಕೊಳ್ಳಬೇಕು. ಈ ದಿಶೆಯಲ್ಲಿ ಅದರೂ 'ಅವನ ನೆನಪು', ಕರ್ನಾಟಕ ಕಾಲೇಜಿನ ವಜ್ರಮಹೋತ್ಸವ, 'ಸಿದ್ಧಗಂಗಾಶ್ರೀ', ಸಿಹಿನೊಳಗಿನ ಮುತ್ತು 'ಗೌರೀಶನ ಗೌರವ' ಇತ್ಯಾದಿ ಕವಿತೆಗಳು ಬದುಕಿನ ಮಹತಿಗೆ ಶರಣು ಹೇಳುತ್ತವೆ. ಶರಣಮ್ಮನೇ ಆಗಿವೆ.ಮಹಾಂತ ಭಿಕ್ಷೆಯಲ್ಲಿ ನಾಲ್ಕು ತಂತಿ ಮಿಡಿದು ಸಮಾಜ ಹೀಗಾಗಬೇಕು ಎಂಬುದರ ಕಡೆಗೆ ನಿರ್ದೇಶನ ನೀಡಿದೆ. ಈ ಎಲ್ಲ ಕವಿತೆಗಳಲ್ಲಿ ಅರ್ಥಕ್ಕೆ ನಿಲುಕದ ಧ್ವನಿ ಕೇಳಿಬಂದಂತೆ ಎನಿಸಿದರೂ ಚಿಂತನೆಯ ತನ್ಮಯತೆಯಲ್ಲಿ ಶಬ್ದ ಧ್ವನಿ ದೂರಾಗಿ ಮಹಾತ್ಮನ ಹುಚ್ಚು ದಿವ್ಯಾತ್ಮದ ಸಂದೇಶವಾಗಿ ರೂಪಿತವಾಗಿದೆ. ತಾಯಿ ಜನ್ಮಕೊಟ್ಟು ತಾಯಿ ಎನಿಸಿಕೊಂಡರ ಜ್ಞಾನವನ್ನು ನೀಡಿ ಮನಸ್ಸನ್ನು ನಡೆಸಿಕಲಿಸಿದ್ದು ಜ್ಞಾನ

ಎಂಬುದನ್ನು ನೆನಸಿಕೊಂಡಾಗ ನಮ್ಮ ನಮ್ಮ ಕಲಿತ ಶಾಲೆಗಳು ನಮ್ಮನ್ನು ಮುತ್ತು ರತ್ನವಲ್ಲಿ ಕೆತ್ತಿ ನಿಲ್ಲಿಸಿ ನೋಡಿ ಸಂತೋಷ ಪಡುವ ಹಡೆದ ತಾಯಿಗಿಂತಲೂ ಹೆಚ್ಚೆಂಬುದನ್ನು ಕರ್ನಾಟಕ ಕಾಲೇಜಿನ ವಜ್ರ ಮಹೋತ್ಸವ ಕವಿತೆ ಸಾರಿದರೆ, ಸಿದ್ಧಗಂಗಾಶ್ರೀಯು ಸೇವಾ ಕ್ಷೇತ್ರದ ದಾಸೋಹದ ನಿತ್ಯನೂತನ ಶಕ್ತಿಯಾಗಿದೆ. ಎಲ್ಲಕ್ಕೂ ಹೆಚ್ಚಾಗಿ ಅಲ್ಲಿ ನಿರ್ಭಾವದ ಅಂದವು ಎದ್ದು ನಿಂತಿದೆ. ಅಂತಹ ಸಂಸ್ಕಾರವನ್ನು ಪಡೆದ ಕವಿ ಸ್ನೇಹ ಕಾರ್ತಿಕದಲ್ಲಿ ಚಿಂತನ ಕ್ಷಿತಿಜವನ್ನು ಕಂಡು ಹಾರೈಸಿದ್ದಾನೆ. ಜಾನಪದ ಸಾಹಿತ್ಯದ ಒಬ್ಬ ಹೊಸ ಋಷಿ ಸಿಂಪಿಯೊಳಗಿನ ಮುತ್ತು ಕಂಡು ಅಲ್ಲಿ ಅರವಿಂದ ತತ್ವದಿಂದ ಸಂಸ್ಕಾರ ಪಡೆದಿದ್ದಾನೆ. ಗೌರೀಶರಲ್ಲಿ ಗೌರವವನ್ನು ಕಂಡರೆ ಶರಣಮ್ಮರಲ್ಲಿ ನಾವು ಬಾಗುವ ಮೊದಲೇ ಕೈಮುಗಿಯುವ ಅಚ್ಚ ಸಂಸ್ಕೃತಿಯನ್ನು ಕಂಡಿದ್ದಾನೆ. ಮಹಾಂತ ಭಿಕ್ಷೆಯಲ್ಲಿ ಹೃದಯದ ಅಂತಃಕರಣವನ್ನು ತುಂಬಲು ಯತ್ನಿಸಿ ಆ ಮೂಲಕ ಅಚ್ಚ ಬದುಕಿನ ಹಣತೆ ಹೊತ್ತಿಸಿ ನಿಚ್ಚ ಬಾಳನ್ನು ಬದುಕುವ ಪರಿಯನ್ನು ಕಂಡಿದ್ದಾನೆ. ಇಂತಹ ಕವಿತೆಗಳ ಒಳಮಿಡಿತವುಕೊಳ್ಳುವುದಕ್ಕಿತಲೂ ತನ್ನಲ್ಲಿ ಇದ್ದುದ್ದನ್ನು ನಿರಪೇಕ್ಷೆಯಿಂದ ಕೊಡುವುದನ್ನು ಕಲಿಸುತ್ತದೆ. ಇನ್ನೂ ಸೂಕ್ಷ್ಮವಾಗಿ ಹೇಳಬೇಕಾದರೆ ಅಳಿದ ಮೇಲೆಯೂ ಬಾಳು ಉಳಿಯಬೇಕು ಎಂಬುದಕ್ಕೆ ಸ್ಫೂರ್ತಿಯನ್ನು ನೀಡುತ್ತದೆ.

ಕೃತಜ್ಞತಾ ಜೀವಿಯಾದ ಮನುಷ್ಯನು ಕೊಡುವುದನ್ನು ಕಲಿತ ಮನುಷ್ಯನು ತಾನು ಪಂಚಭೂತಗಳಿಂದ ಯಾವ ಗುಮಾಣಿಯೂ ಇಲ್ಲದೆ ಬದುಕಿ ಬೆಳೆಯುತ್ತಿರುವ ಜೀವಿ ಎಂಬುದನ್ನು ಸದಾ ಧ್ಯಾನದಲ್ಲಿಟ್ಟಿರಬೇಕು. ಮನುವಿನ ಮಕ್ಕಳಾದ ನಾವು ಬರೀ ವ್ಯಾಷ್ಟಿಯಾಗಿರದೇ ಸಮಷ್ಟಿಯಾಗಿ ಮಣ್ಣು ಹಣತೆಯನ್ನು 'ಮಣ್ಣಿಗೆ ಬಿಟ್ಟು ವಿಶಾಲ ಬಾನಿನಲ್ಲಿ ಚುಕ್ಕೆಯಾಗಲು ಧಾವಿಸಬೇಕು. ಗಾಳಿಯ ಉಸಿರಿನಲ್ಲಿ ನಮ್ಮ ಬದುಕಿನ ಪರಿಮಳವು ನೆಲದ ಮೇಲಿನ ಹೂವಾಗಿ ಮುಗಿಲಲ್ಲಿಯ ಚುಕ್ಕೆಗೆ ಅವನ್ನು ರೂಪಿಸಲು ಯತ್ನಶೀಲರಾಗಬೇಕು. ಇದೇ ಕೃತಜ್ಞತಾ ಜೀವನವು ನೀಡಿರುವ ಸಂದೇಶದ ಉಸಿರು. ಆದರೆ ಇಂದಿನ ಸಮಾಜ ಬದುಕಿನ ಸುಖದ ಸುಪ್ಪತ್ತಿಗೆಯ ತುತ್ತ ತುದಿಯನ್ನು ಮುಟ್ಟಿರುವೆ ಎಂಬ ಭ್ರಮೆಯಲ್ಲಿದೆ. ಅಂತಹ ಸಮಾಜಕ್ಕೆ ಬರಿ ಸುಖೋಪ ಭೋಗಕ್ಕೆ ಋಣಾಂಕಿತವಾಗಿರುವ ಸಮಾಜಕ್ಕೆ ನಮ್ಮ ಮಣ್ಣಿನ ವಾಸನೆಯಲ್ಲಿ ಇರುವೆ ಎಂಬ ತತ್ವವು ಜಿಜ್ಞಾಸೆಯಾಗಿದೆ ಎಂಬ ತತ್ವವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಇರುವೆ ಇದು to be ಎನ್ನುವ ಇಂಗ್ಲೀಷಿನ ಧಾತು ಹೌದು. ಮೂಲ ದ್ರಾವಿಡ ಧಾತುವು ಹೌದು. ಬದುಕಿನ ಧಾತುವು ಹೌದು. ಇರುವೆ ಎಂದರೆ ಇರುವೆ ಎಂಬ ಕೀಟ. ಈ ಕೀಟದಿಂದ ಕಲಿಯ ಬೇಕಾದದ್ದು ಬಹಳವಿದೆ. ಸಹ ಜೀವನ, ಸ್ನೇಹ ಜೀವನ ಇತ್ಯಾದಿ ಭಾರತೀಯ ತತ್ವ ಅದಕ್ಕೆ ವಿಶ್ವತತ್ವವೇ... ಇದರಲ್ಲಿ ಅಡಕವಾಗಿದೆ. ಇದೇ ಮಾತನ್ನು ಬೇಂದ್ರೆಯವರು ಇರು ಇರಿ, ಇರುವೆ ಎಂದು ವಿಶ್ವತತ್ವವನ್ನೆ ವಾಮನನ ಪುಟ್ಟ ಮೂರು ಪಾದಗಳಲ್ಲಿ ಹುದುಗಿರುವ ಬೌಮತ್ವವನ್ನು ಹಿಡಿದಿಟ್ಟು ಹೇಳಿದ್ದಾರೆ. ಆ ತತ್ವವೇ ರಿಂಗಣ ಗೊಂಡಂತೆ ಕಾಣುತ್ತದೆ. ಈ ಪ್ರಕಾರಗಳಲ್ಲಿ ಕಣವಿಯವರು ಕವಿತೆಯರ ಜಾಡು ಒಂದೊಮ್ಮೆ ಬೇಂದ್ರೆ ಜಿಜ್ಞಾಸದತ್ತ ಬಿಚ್ಚಿ ಹೇಳುವ ಕಡೆಗೆ ದುಡಿದದ್ದು ಕಂಡು ಬರುತ್ತದೆ.

ಇರುವೆಯ ತತ್ವದ ಹಿನ್ನಲೆಯಲ್ಲಿ ಬದುಕು ಹಸನಾದಾಗ ಋಗ್ರಾಸಗ್ರಹಣದಲ್ಲಿಯೂ ಬದುಕು ತುಂಬಿ ಬಂದ ಬಾಗಿನವನ್ನು ನಿಸರ್ಗದಲ್ಲಿ ಕಾಣುತ್ತೇವೆ. ಜೊತೆಗೆ ಯುವ ಶಕ್ತಿಗೆ ಕಾಸಿ ಬಡಿದ ಕುಲುಮೆಯನ್ನು ಒಲುಮೆಯ ಕಿಡಿಯಲ್ಲಿ ಒದಗಿಸಿಕೊಡುತ್ತೇವೆ. ಎಲ್ಲಕ್ಕೂ ಭಾರಿಯಾಗಿ, ನಾನು ಮತ್ತು ಇತರರು ಒಂದೇ ವೃಕ್ಷದಲ್ಲಿರುವ ಆತ್ಮಗಳು ಗುಲಾಬಿಯ ಹೂಗಳು, ಕೋಗಿಲೆಗಳು ಎಂದು ಮನಗಾಣುತ್ತೇವೆ. ನಮ್ಮನ್ನೆಲ್ಲ ಈ ಶಿಥಿಲ ಜಗತ್ತಿನಲ್ಲಿ ಶಿಲ್ಪಿಸಿದ ಆ ಬ್ರಹ್ಮನನ್ನು ಕೃತಜ್ಞತಾ ಭಾವದಿಂದ ಕಾಣುತ್ತೇವೆ. ಈ ದೃಷ್ಟಿ ನಮ್ಮಲ್ಲಿ ಬರಬೇಕಾದರೆ ನಮ್ಮ ಭೂತ ಎಂದರೆ ನಮ್ಮ ಇತಿಹಾಸ ನಮಗೆ ನಮ್ಮ ಟೊಂಕದಲ್ಲಿ ಶಕ್ತಿಯನ್ನು ತಂದುಕೊಡಬೇಕು. ಹಿಂದಿನ ನೆನಪಿನ ಬಲದಲ್ಲಿ ಇಂದುಭ್ರಮಾರಹಿತ ನಿರಂಜನ ಜೀವನವಾಗಿರಬೇಕು. ಭವಿಷ್ಯತ್ತು ಅಬ್ದುಲ್ ರಹಮಾನ್ ಆಜಾದ್ ಹೇಳಿದಂತೆ ಮಾನವನ ಆಸೆ ಆಕಾಂಕ್ಷೆಗಳ ವಾಸ್ತವಲವಾಗಬೇಕು. ಅಲ್ಲಿಯ ಮಾನವನು ಉಳಿದ ದಾರಿಯನ್ನು ಕಂಡು ಅದರ ಕೊರತೆಗಳನ್ನು ತುಂಬಿಕೊಂಡು ಸಾಗುವ ಹವ್ಯಾಸಿಯಾಗಬೇಕು ಆಗ ಮನುಷ್ಯ ತನ್ನ ಮನಸ್ಸಿನ ಆಳದಲ್ಲಿ ಇಣುಕಿ ನೋಡಲು ತತ್ಪರನಾಗುತ್ತಾನೆ. ತನ್ನ ಆತ್ಮದ ಹೊಸ್ತಿಲಿನ ಬಳಿ ಪಹರೆ ಮಾಡಲು ಕಲಿಯುತ್ತಾನೆ. ಮತ್ತು ನೆಲದ ವಾಸನೆಯಿಂದ ಬೆಳೆದ ಉಪಕಾರವನ್ನು ತನ್ನ ದೀರ್ಘ ಆಯುಷ್ಯದಿಂದ ತೀರಿಸದೇ ತನ್ನ ಉಜ್ವಲವಾದ ಚರಿತ್ರೆಯನ್ನು ಬಿಟ್ಟು ಹೋಗಿ ಜಗತ್ತಿನ ಗೋಪುರದ ಗಡಿಯಾರ ಸರಿಯಾಗಿ ನಡೆಯುವಲ್ಲಿ ಸಮಭಾಗಿಯಾಗುತ್ತಾನೆ. ಹೀಗೆ ಜೀವ ಧ್ವನಿಗಳನ್ನು ರೂಢಿಸಿಕೊಂಡು ಎಲ್ಲ ಧ್ವನಿಗಳಲ್ಲಿ ಆತ್ಮಧ್ವನಿ ಶ್ರೇಷ್ಠವೆಂದಾಗ ಸಮಷ್ಟಿಯಲ್ಲಿ ಆತ್ಮನು ನೀಲ ಪಕ್ಷಿಯಾಗಿ ಭಾವದ ಚೆಂಕಿ ಬೀಜಗಳನ್ನು ಹುಟ್ಟಿದ ನೆಲಕ್ಕೆ ಚೆಲ್ಲಿ ಕೊರಗು ಮರಗುಗಳನ್ನು ಬೀಳುಗಳೆದು ಆಕಾಶದಲ್ಲಿ ಶಾಶ್ವತವಾದ ಅಮೃತಪಾಶವಾಗಿ ತೀರವಿಲ್ಲದ ಶಾಂತತೆಯನ್ನು ಪಡೆದು ನನ್ನ ಮಾಣಿಕದ ಅಕ್ಷಿಯಿಂದ ಲೋಕವನ್ನೇಳಿವೆ.

''ಇಳಿದಿರುವೆ ಜ್ಞಾನ ವೃಕ್ಷದ ಕೊಂಬೆಗೆ ಸ್ವಗ್ಗದೆಲ್ಲಾ ಹೂಗಳಲ್ಲಿ ಕಿಕ್ಕಿರಿದಿಹವು.

''ಅನಂತತೆಯ ಝರಿ ತೊರೆಯ ಬದಿಗೆ''-

ಎಂದು ಸ್ವತಂತ್ರವಾಗಿ ತೃಪ್ತಿಯಿಂದ ಹಾಡುತ್ತಾ...

ಸುಬ್ಬಾನೇ ಅಲ್ಲಾ ಅಜಿ. ಅಸರಾ ಬೀ

ಅಬುರಷಿ (ಅಬ್ಬೇಷಿ) ಎಂದು ಆಕಾಶದಾಚೆಯ ವಿಶಾಲ ಸುಧೀರ್ಘ ಪಯಣದಲ್ಲಿ ಮಾನವನು ಮರಳಿ ಮುಟ್ಟುತ್ತಾನೆ.

ಹೀಗೆ ಕಣವಿಯವರು ಜೀವ ಧ್ವನಿಯಲ್ಲಿ ಸೇರಿರುವ ಅನಂತ ಧ್ವನಿಗಳನ್ನು ಬಿಡಿಸಿ ಅವೆಲ್ಲಾ ಒಂದೇ ಧ್ವನಿಯ ಮೂಲ ಗಂಟಿನಿಂದ ಬಂದುವು. ಅದಕ್ಕಾಗಿ ''ಧ್ವನಿ - ದನಿ. ಕೃತಿಯಾದಾಗ ಈ ಗಾಯಕನ ಹಿಂದೆ ಮಾಯಕದ ತಂಬೂರಿ ನರನರವ ಮೀಟಿ ಹೊರಡಿಸುತ್ತದೆ ಎಂದು ಉದ್ಗಾರ ತೆಗೆದಿರುವುದು ಅರ್ಥಪೂರ್ಣವಾಗಿದೆ.

**MATRIMONIAL**

Alliance invited for Kannada Smartha Hoysala Karnataka girl Engineering Graduate age 23 years. 5'-1" tall. Preferably Software Engineers, B.E. or M.B.A. Father retired executive Engineer Central Railways.

Contact : Mr. C.S. Shankaranarayana

Tel.: 2760 6996

**TRIMURTI**


**JEWELLERS**

**GOLD AND DIAMOND ORNAMENTS**

460/4, Venkatesh Niwas,
Ground Floor,
Bhaudaji Road,
Opp Mysore Association,
Matunga (C.Rly.)
Mumbai-400 019.

Phone : **2402 3485**

# ಎಂ. ಆರ್. ಪೈ



'ಮಹಾ ಜನಾಃ ಯೇನ ಗತಾಃ ಸಪಂಥಃ' ಎಂಬುದೊಂದು ಸಂಸ್ಕೃತ ಗಾದೆ, ಸುಭಾಷಿತ. ಅದಕ್ಕೆ ಸರಿ ಸುಮಾರು ಕನ್ನಡದ ಗಾದೆ. 'ಆನೆ ನಡೆದದ್ದೇ ದಾರಿ' ಎಂದಿದೆ. ಅಂದರೆ ದೊಡ್ಡವರು ತಮ್ಮ ದಾರಿಯನ್ನು ತಾವೇ ನೋಡಿಕೊಂಡು ಉಳಿದವರು ಹಿಂಬಾಲಿಸುವಂತೆ ಮಾಡುತ್ತಾರೆ ಎಂಬ ಅರ್ಥ. ಅದೇ ರೀತಿ ಎಂ. ಆರ್.ಪೈ ಪೂರ್ಣ ನಾಮಧೇಯ ಮಂಗಳೂರು ರಂಗ ಪೈ - ಅವರು ಹೆಜ್ಜೆ ಮೂಡದ ಹಾದಿಯಲ್ಲಿ ನಡೆದು ಉಳಿದವರಿಗೆ ನಡೆಯಲು ದಾರಿ ಮಾಡಿಕೊಟ್ಟಿದ್ದಾರೆ. ಗ್ರಾಹಕ, ಬಳಕೆದಾರ, ಅನುಭೋಕ್ತ ಮೊದಲಾದ ಶಬ್ದಗಳ ಪರಿಚಯವಾಗುವ ಮೊದಲು, ಗ್ರಾಹಕರ ಹಕ್ಕುಗಳ ಸಂರಕ್ಷಣಾ ಕಾಯಿದೆ, ಗ್ರಾಹಕ ಸಂಘಟನೆ, ಠೇವಣಿದಾರರ ಸಂಘಟನೆ ಮೊದಲಾದವುಗಳು ಅಸ್ತಿತ್ವಕ್ಕೆ ಬರುವ ಮೊದಲು ಜನ ಸಾಮಾನ್ಯರ ಹಕ್ಕುಗಳಿಗಾಗಿ ಧ್ವನಿ ಎತ್ತಿದವರು. ಎಂ. ಆರ್ ಪೈ ಅವರು. ೧೯೫೦ರಲ್ಲೇ ಪತ್ರಗಳಿಗೆ ಹಚ್ಚಿದ ಸ್ಟ್ಯಾಂಪ್ (ಟಪ್ಪಾಲು ಚೀಟಿ) ಕಳುವಾದ ವಿಷಯ 'ದಿ ಟೈಂಸ್ ಆಫ್ ಇಂಡಿಯಾ' ಪತ್ರಿಕೆಗೆ ಬರೆದದ್ದು ಟಪ್ಪಾಲು ಸಂಸ್ಥೆಗೆ ಈ ವಿಷಯದಲ್ಲಿ ಪರಿಹಾರಕ್ರಮವನ್ನು ಕೈಗೊಳ್ಳುವಂತೆ ಮಾಡಿತ್ತು. ಟೆಲಿಫೋನು, ಬ್ಯಾಂಕು, ಪ್ರಾವಿಡೆಂಟ್ ಫಂಡ್ (ಭವಿಷ್ಯ ನಿಧಿ), ವಿಮಾನಯಾನ ಸಂಸ್ಥೆಗಳು ಮೊದಲಾದ ಅನೇಕ ಸಂಸ್ಥೆಗಳೊಡನೆ ಜನ ಸಾಮಾನ್ಯರಿಗಾಗುವ ಅನ್ಯಾಯದ ವಿರುದ್ಧ ಹೋರಾಟ ನಡೆಸಿ ವಿಜಯ ದೊರಕಿಸಿ ಕೊಟ್ಟವರು ಎಂ. ಆರ್. ಪೈ. ಅವರು ಹೀಗಾಗಿಯೇ 'ರೀಡರ್ಸ್ ಡೈಜೆಸ್ಟ್' ನಂಥ ನಿಯತಕಾಲಿಕೆ (1955 ಅಕ್ಟೋಬರ್ ಸಂಚಿಕೆ) ಅವರನ್ನು ಗ್ರಾಹಕರ ಬಂಧು ಎಂದು ಕರೆದು ಅವರ ಕಾರ್ಯ ಸಾಧನೆಗಳನ್ನು ಮುಕ್ತವಾಗಿ ಹೊಗಳಿ ಬರೆದಿತ್ತು.

ಮಂಗಳೂರು ರಂಗ ಪೈ ಅವರದ್ದು ದೊಡ್ಡ ಕುಟುಂಬ. ಎಂಟು ಜನ ಸಹೋದರರಲ್ಲಿ ಅವರೇ ಹಿರಿಯವರು. ಮಂಗಳೂರಿನಲ್ಲಿ ಶಾಲಾಂತ ಪರೀಕ್ಷೆಯ ನಂತರ ಅವರು ಮದ್ರಾಸಿನಲ್ಲಿ (ಈಗಿನ ಚೆನ್ನೈನಲ್ಲಿ) ರಾಜಕಾರಣ ಶಾಸ್ತ್ರದಲ್ಲಿ (ಎಂ.ಎ.) ಸ್ನಾತಕೋತ್ತರ ಪದವಿಯನ್ನು ವಿಶ್ವವಿದ್ಯಾಲಯಕ್ಕೇ ಮೊದಲಿಗರಾಗಿ ಪಡೆದು ಮುಂದೆ ಅಮೇರಿಕೆಯ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಿಂದ ಪತ್ರಿಕೋದ್ಯಮದ ಸ್ನಾತಕೋತ್ತರ ಪದವಿಯನ್ನು ಪಡೆದು ತಾಯ್ನಾಡಿಗೆ ಹಿಂದಿರುಗಿದರು. ಕೆಲವು ಕಾಲ ಪತ್ರಿಕೋದ್ಯಮದಲ್ಲೇ ವೃತ್ತಿ ಜೀವನವನ್ನು ಮುಂದುವರಿಸಿದರೂ ಬಹಳ ದಿನ ಅವರು ಅದರಲ್ಲಿ ಉಳಿಯಲಿಲ್ಲ. ಕೆಲವು ಕಾಲ ವಿದೂ ಕಂಪೆನಿಯೊಂದರಲ್ಲಿ ಅದರ ಪ್ರಚಾರಾಧಿಕಾರಿಯಾಗಿ ದುಡಿದರು. ''ಮುಂದೆ 1956ರಲ್ಲಿ. ಫೋರಂ'' ''ಆಫ್ ಆಫ್ ಫ್ರೀ ಎಂಟರ್‌ಪ್ರೈಸ್'' ಎಂಬ ಸಂಸ್ಥೆಯ ಕಾರ್ಯದರ್ಶಿಗಳಾಗಿ ಆ ಸಂಸ್ಥೆಯನ್ನು ಒಂದು ಹೆಸರಾಂತ ರಾಷ್ಟ್ರೀಯ ಸಂಸ್ಥೆಯಾಗಿ ಬೆಳೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. 1976ರಿಂದ ಅವರು ಈ ಸಂಸ್ಥೆಯ ಉಪಾಧ್ಯಕ್ಷರಾಗಿ ಕೊನೆಯವರೆಗೂ ಸಕ್ರಿಯವಾಗಿ ಸಂಸ್ಥೆಯ ಒಂದು ಅಂಗವಾಗಿ ಉಳಿದಿದ್ದರು. 'ಫೋರಂ ಆಫ್ ಫ್ರೀ ಎಂಟರ್‌ಪ್ರೈಸ್'ನ ಮುಖಾಂತರ ಅವರು ಲಕ್ಷಾವಧಿ ಜನರ ಸಂಪರ್ಕದಲ್ಲಿದ್ದು ಅನೇಕ ಸಮಸ್ಯೆಗಳಿಗೆ ಪರಿಹಾರ ದೊರಕಿಸಿಕೊಟ್ಟಿದ್ದಾರೆ. ಭಾರತದ ಖ್ಯಾತ ನ್ಯಾಯವಾದಿ ತೆರಿಗೆ ತಜ್ಞ ನಾನಿ ಪಾಲ್ಖಿವಾಲಾರ ಬಜೆಟ್ ವಿಶ್ಲೇಷಣಾ ಸಭೆಯನ್ನೂ 1958ರಿಂದ ಆಯೋಜಿಸುತ್ತಾ ಬಂದರು. ಇದು ಎಷ್ಟು ಜನಪ್ರಿಯವಾಗಿತ್ತೆಂದರೆ ಮುಂಬಯಿ ಕೆಲವು ಟಿ.ವಿ. ಚ್ಯಾನೆಲ್‌ಗಳು ಈ ಸಭೆಯಲ್ಲಿ ನಾನಿ ಪಾಲ್ಖಿವಾಲಾರ ಭಾಷಣವನ್ನು ಪ್ರತ್ಯಕ್ಷ ಪ್ರಸಾರ ಮಾಡುತ್ತಿದ್ದವು. 2002ರಲ್ಲಿ ಪೈ ಅವರು ಬರೆದ ''ದಿ ಲೆಜೆಂಡ್ ಆಫ್ ಪಾಲ್ಖಿವಾಲಾ'' ಎಂಬ ಪುಸ್ತಕವು ಕೂಡಲೇ ಮಾರಾಟವಾಗಿ ಮರು ಮುದ್ರಣಕ್ಕೆ ಕೊಡಬೇಕಾಯಿತು. ಪೈ ಅವರು ಈ ಪುಸ್ತಕಕ್ಕಾಗಿ ಪ್ರಕಾಶಕರು ಕೊಡಬಂದ 6 ಲಕ್ಷ ರೂಪಾಯಿಗಳನ್ನು ಪಾಲ್ಖಿವಾಲಾರು ಸಂಪರ್ಕವಿಟ್ಟುಕೊಂಡಿದ್ದ ಅನೇಕ ಸಂಸ್ಥೆಗಳಿಗೆ ದಾನಮಾಡಿಬಿಟ್ಟರು.

ಎಂ.ಆರ್.ಪೈ ಅವರು ಅನೇಕ ಲೇಖನಗಳನ್ನೂ, ಪುಸ್ತಕಗಳನ್ನೂ ಬರೆದು ಗ್ರಾಹಕರಿಗೆ ಅವರು ಹಕ್ಕು ಅಧಿಕಾರಗಳೇನು? ಅವುಗಳನ್ನು ಹೇಗೆ ಕಾಪಿಟ್ಟು ಕೊಳ್ಳಬೇಕು? ಎಂಬುದಕ್ಕೆ ಮಾರ್ಗದರ್ಶನ ವನ್ನು ನೀಡಿದ್ದಾರೆ. ''ವಾಟ್ ಈಸ್ ರಾಂಗ್ ವಿತ್ ಟೆಲಿಫೋನ್ಸ್ !'' ( ಟೆಲಿಫೋನ್ ಎಲ್ಲಿ ಎಡವಿದೆ?) ''ಟೆಲಿಫೋನ್ - ಎಕ್ಸೆಸ್ ಬಿಲ್ಲಿಂಗ್ ಕಾಸಸ್ ಎಂಡ ಕ್ಯೂರ್'' (ಟೆಲಿಫೋನ್ - ಹೆಚ್ಚಿನ ದರಪಟ್ಟಿಕೆ ಕಾರಣಗಳು ಮತ್ತು ಉಪಾಯಗಳು ರೈಟ್ಸ್ ಎಂಡ್ ರೆಸ್ಪಾನ್ಸಿಬಿಲಿಟೀಸ್ ಆಫ್ ಕಂಸ್ಯೂಮರ್ಸ್'' (ಗ್ರಾಹಕರ ಹಕ್ಕುಗಳು ಮತ್ತು ಜವಾಬ್ದಾರಿಗಳು'') ''ಇಫೆಕ್ಟೀವ್ ಕಂಸ್ಯೂಮರ್ ಆಕ್ಶನ್'' (ಗ್ರಾಹಕರ ಪರಿಣಾಮಕಾರಿ ಪ್ರಕ್ರಿಯೆ). ''ಕಂಸ್ಯೂಮರ್ ಆಕ್ಟಿವಿಸಂ ಇನ್ ಇಂಡಿಯಾ'' (ಭಾರತದಲ್ಲಿ ಗ್ರಾಹಕ) ''ಡಿಪಾಸಿಟರ್ ರೈಟ್ಸ್ ಎಂಡ್ ಕಂಸ್ಯೂಮರ್ ಸರ್ವಿಸ್ ಇನ್ ಬ್ಯಾಂಕ್ಸ್'' (ಠೇವಣಿದಾರರ ಹಕ್ಕುಗಳು ಮತ್ತು ಬ್ಯಾಂಕುಗಳಲ್ಲಿ ಗ್ರಾಹಕರ ಸೇವೆಗಳು (ಇದು 17 ಮುದ್ರಣಗಳನ್ನು ಕಂಡಿದೆ) ''ಕರಿಯರ್ ಅಪರ್ಟ್ಯೂನಿಟೀಸ್ ಇನ್ ದಿ 21ಟೆಸ್ಟ್ ಸಂಚ್ಯುರಿ'' (21ನೆಯ ಶತಮಾನದಲ್ಲಿ ವ್ಯವಸಾಯದ ಅವಕಾಶಗಳು) ಮುಂತಾದವು ಅವರು ಬರೆದ ಪ್ರಮುಖ ಲೇಖನಗಳು. ಸತತವಾಗಿ 40 ವರ್ಷಗಳು ಅವರು ಮುಂಬಯಿ ಸೋಮಯ್ಯಾ ಕಾಲೇಜಿನಲ್ಲಿ ಮಕ್ಕಳಿಗೆ ವ್ಯವಸಾಯಗಳನ್ನು ಆರಿಸಿಕೊಳ್ಳುವ ವಿಷಯದಲ್ಲಿ ಸಂಕಿರಣಗಳನ್ನು ನಡೆಸುತ್ತಿದ್ದರು.

ಎಂ. ಆರ್. ಪೈ ನ ಬಹಳ ಮೃದು ಭಾಷಿಗಳು. ಅವರು ಯಾವಾಗಲೂ ಸ್ಟ್ರೈಕ್ ಬಂದ್ ಮುಂತಾದವುಗಳ ವಿರೋಧಿ. ಇದು ಕಾನೂನುಬಾಹಿರ ಮಾರ್ಗವೆಂದೇ ಅವರು ನಂಬಿದ್ದರು. ಯಾವುದೇ ರಾಜಕೀಯ ಸಂಬಂಧವಿರದಂತೆ ಅವರು ಕೆಲಸವನ್ನು ಕೇವಲ ಪತ್ರಗಳ ಮುಖೇನ ಹಾಗೂ ಅವಶ್ಯವಿದ್ದರೆ ನ್ಯಾಯಾಂಗದ ಮುಖೇನ ಸಾಧಿಸುತ್ತಿದ್ದರು. ಹೆಸರು, ಕೀರ್ತಿಗಳನ್ನು ಬಯಸದ ಪೈ ಅವರು ಅನೇಕ ನಾಮವಂತ ಸಂಸ್ಥೆಗಳಲ್ಲಿ ಸಲಹಾಗಾರರಾಗಿ, ಸದಸ್ಯರಾಗಿ, ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಅಖಿಲ ಭಾರತೀಯ ಬ್ಯಾಂಕ್ ಠೇವಣಿದಾರರ ಸಂಸ್ಥೆ, ಮುಂಬಯಿ ಗ್ರಾಹಕ ಪಂಚಾಯತ್, ಭಾರತ ಸರಕಾರದ ಡಾ. ಆತ್ರೇಯ ಸಮಿತಿ, ರಿಸರ್ವ್ ಬ್ಯಾಂಕುಗಳಲ್ಲಿ ಗ್ರಾಹಕರ ಸೇವೆಯ ಸಮಿತಿ (ಮ.ನ. ಗೋಯ್ ಪೋರಿಯಾ ಸಮಿತಿ), ಯು.ಟಿ.ಐ.ನ ಸೋಶಿಯಲ್ ಆಡಿಟ್ ಕಮಿಟಿ, ಮುಂತಾದ ಗ್ರಾಹಕ ಸಂಬಂಧಿತ ಸಂಸ್ಥೆಗಳಲ್ಲದೆ ''ಟಾಟಾ ಕಾಫಿ ಲಿ.'', ''ಎಚ್.ಡಿ.ಎಫ್.ಸಿ.'', ''ಸ್ಟ್ಯಾಂಡರ್ಡ್ ಲೈಫ್ ಇನ್ಶೂರೆನ್ಸ್''. ''ಬಜಾಜ್ ಎಲೆಕ್ಟ್ರಿಕಲ್ಸ್'' ಮುಂತಾದ ಸಂಸ್ಥೆಗಳ ನಿರ್ದೇಶಕರಾಗಿ, ಎ.ಡಿ. ಶ್ರಾಫ್ ಮೆಮೋರಿಯಲ್ ಟ್ರಸ್ಟ್, ಮೊರಾರ್ಜಿ ಜೈ ವೈದ್ಯ ಮೆಮೋರಿಯಲ್ ಟ್ರಸ್ಟ್, ಪೋಲ್ಕಾರ್ಟ್ ಫೌಂಡೇಶನ್, ಜಿ.ಎಸ್. ಬಿ. ಮೆಡಿಕಲ್ ಟ್ರಸ್ಟ್ ಮುಂತಾದ ಸೇವಾನಿರತ ಸಂಸ್ಥೆಗಳ ಟ್ರಸ್ಟಿಯಾಗಿ ಬಹುಮುಖಿ ಚಟುವಟಿಕೆಗಳಲ್ಲಿ ಅವರು ತೊಡಗಿಕೊಂಡಿದ್ದರು.

ಇಂತಹ ಒಬ್ಬ ವಿಶಿಷ್ಟ ಹೊರನಾಡ ಕನ್ನಡಿಗರಾದ ಎಂ.ಆರ್. ಪೈ ಅವರು ಜುಲೈ 3, 2003ರಂದು ತಮ್ಮ 72ನೆಯ ವಯಸ್ಸಿನಲ್ಲಿ ಮುಂಬೈ ಜನತೆಗೆ ವಿದಾಯ ಹೇಳಿ ಯಾರೂ ಹಿಂತಿರುಗಿ ಬಾರದ ಊರಿಗೆ ತೆರಳಿಬಿಟ್ಟರು. ಅವರ ಎಲ್ಲಾ ಕಾರ್ಯದಲ್ಲೂ ಅವರಿಗೆ ಹೇಳಿ ಮಾಡಿಸಿದಂತಹ ಸಹಧರ್ಮಿಣಿ ಗೀತಾ ಪೈ ಮತ್ತು ಒಬ್ಬ ಮಗ ಸೊಸೆ, ಒಬ್ಬ ಮಗಳು ಅಳಿಯನನ್ನು, ಅಪಾರ ಬಂಧು ವರ್ಗವನ್ನೂ, ಸ್ನೇಹಿತರನ್ನು, ಅಭಿಮಾನಿಗಳನ್ನೂ ಹಿಂದೆ ಬಿಟ್ಟಿದ್ದಾರೆ. ಆದರೆ ಅವರ ಕಾರ್ಯ, ಅವರ ಸಾರ್ಥಕ ಜೀವನ ಜನಮನದಲ್ಲಿ ಎಂದೆಂದೂ ಹಚ್ಚಹಸುರಾಗಿ ಉಳಿದು ಅಸಹಾಯಕರಿಗೆ ಸ್ಫೂರ್ತಿ ದೀವಿಗೆಯಾಗಿರುತ್ತದೆ ಎಂಬುದು ನಿಶ್ಚಿತ.

ಇಂಥ ಧೀರೋದಾತ್ತ ಜೀವಿಗೆ ನೇಸರುವಿನ ನಮನಗಳು.

# ಭಾರತೀಯ ಕಲೆ

ಭಾಗ - 17


ಭಾರತದಲ್ಲಿ ಚಿತ್ರಕಲೆ ಹಾಗೂ ಶಿಲ್ಪಕಲೆಗಳು ಬಹಳ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿವೆ. ವಿವಿಧ ಪ್ರಾಂತಗಳಲ್ಲಿ ವಿವಿಧ ಶೈಲಿಗಳು ಬೆಳೆದು ಬಂದಿವೆ. ಓದುಗರಿಗೆ ಭಾರತೀಯ ಕಲೆಯ ಒಂದು ದರ್ಶನವನ್ನು ನೀಡಲು ನಾವು ಶ್ರೀ ಎನ್. ಮರಿಶಾಮಾಚಾರ್ ಅವರು ಬರೆದಿರುವ ಭಾರತೀಯ ಕಲೆ ಎಂಬ ಪುಸ್ತಕದಿಂದ ಆಯ್ದ ಭಾಗಗಳನ್ನು ನೇಸರುವಿನಲ್ಲಿ ಪ್ರಕಟಿಸುತ್ತಿದ್ದೇವೆ. ಸ್ವತಃ ಕಲಾವಿದ, ಶಿಲ್ಪಿ, ಛಾಯಾಗ್ರಾಹಕರಾಗಿರುವ ಮರಿ ಶಾಮಾಚಾರ್‌ರು ಕಲೆಯ ಕ್ಷೇತ್ರದಲ್ಲಿ ಬಹುಮುಖ ಸೇವೆಯನ್ನುಸಲ್ಲಿಸಿದ್ದಾರೆ ಮತ್ತು ಕಲಾಚಟುವಟಿಕೆಗಳಿಗೆ ಸ್ಫೂರ್ತಿ ತಂದಿದ್ದಾರೆ.

ಮುಂಗೈ ಮೇಲೆ ಭದ್ರವಾಗಿ ಕುಳಿತಿರುವ ಪೃಥ್ವಿಯ ದೃಶ್ಯ ತುಂಬಾ ಸುಂದರವಾಗಿ ಮೂಡಿ ಬಂದಿದೆ.

ಬಾದಾಮಿಯ ಮೂರನೆಯ ಗುಹೆಯಲ್ಲಿಯೂ ನಾವು ವರಾಹನನ್ನು ಕಾಣುತ್ತೇವೆ. ಆದರೆ ಐಹೊಳೆಯಲ್ಲಿಯ ವರಾಹನಲ್ಲಿ ಕಾಣುವ ಕ್ರಿಯಾಶೀಲತೆ ಇಲ್ಲಿ ಲೋಪವಾದಂತೆ ಕಂಡುಬರುತ್ತದೆ. ಬಾದಾಮಿಯ ವರಾಹ ಅಂಕಣದಲ್ಲಿ 'ದೇವತೆಗಳು ಮೇಲಿನಿಂದ ಹರಸುತ್ತಿರುವುದು. ಅವರ ಪರಿಚಾರಕರನೇಕರು ನಿಂತಿರುವುದು, ಮಧ್ಯೆ ಮತ್ತು ಬಲಗಡೆ ನಾಗನಿಂತಿರುವುದು, ಮುಂತಾದ ದೃಶ್ಯಗಳು ಅಂಕಣವನ್ನು ಪೂರ್ತಿಯಾಗಿ ವ್ಯಾಪಿಸಿ ಅಸಹಜತೆ ಯನ್ನು ಮೂಡಿಸುತ್ತವೆ. ಇಲ್ಲಿ ವರಾಹನು ಪೃಥ್ವಿಯನ್ನು ತನ್ನ ಕೆಳ ಎಡಗೈಯಲ್ಲಿ ಹಿಡಿದಿರುವನು. ಈ ಗುಹೆಯಲ್ಲಿ ನರಸಿಂಹ, ವಿರಾಟ ಪುರುಷನಾಗಿ ವಿಷ್ಣು ಮತ್ತು ಅನಂತ ವಿಷ್ಣು ಮೂರ್ತಿಶಿಲ್ಪಗಳಿವೆ. ಸ್ತಂಭಗಳಲ್ಲಿರುವ ಪೀಠಗಳ ಮೇಲೆ ಅನೇಕ ಮಿಥುನಗಳನ್ನು ಕೆತ್ತಲಾಗಿದೆ. ಅವರ ಮೈ ಮೇಲಿನ ಆಭರಣಗಳನ್ನು ತುಂಬಾ ಸೂಕ್ಷ್ಮವಾಗಿ ಸೊಗಸಾಗಿ ತೋರಿಸಲಾಗಿದೆ. ವಸ್ತ್ರವಿನ್ಯಾಸ ಅಂದವಾಗಿ ಮೂಡಿಬಂದಿದೆ.

ಬಾದಾಮಿಯ ಎರಡನೇ ಗುಹೆಯಲ್ಲಿ ಅಮೃತ ಮಂಥನದ ದೃಶ್ಯಗಳನ್ನು ಶಿಲೆಯಲ್ಲಿ ಮೂಡಿಸಲಾಗಿದೆ. ಜೊತೆಗೆ ಕೃಷ್ಣನ ಬಾಲ್ಯ ಜೀವನದ ಹಲವಾರು ಪ್ರಸಂಗಗಳನ್ನು ವಿವರಿಸಲಾಗಿದೆ. ಸೌಂದರ್ಯ ಕ್ಕಿಂತಲೂ ವಿಷಯಕ್ಕೆ ಇಲ್ಲಿ ಹೆಚ್ಚು ಪ್ರಾಮುಖ್ಯ ಕೊಡಲಾಗಿದೆ.

ಪಟ್ಟದ ಕಲ್ಲಿನಲ್ಲಿರುವ ದೇವಾಲಯಗಳಲ್ಲಿ, ವಿರೂಪಾಕ್ಷ, ಮಲ್ಲಿಕಾರ್ಜುನ ಹಾಗೂ ಸಂಗಮೇಶ್ವರ ದೇವಾಲಯಗಳು ಪ್ರಮುಖವಾದುವೆಂದು ಹೇಳಬಹುದು. ಮಲ್ಲಿಕಾರ್ಜುನ ಮತ್ತು ವಿರೂಪಾಕ್ಷ ದೇವಸ್ಥಾನಗಳಲ್ಲಿ ಕಂಡುಬರುವ ಶಿಲ್ಪಕಲಾಕೃತಿಗಳು ಪ್ರಾರಂಭದ ಚಾಲುಕ್ಯರ ಶಿಲ್ಪ ಕಲಾಶೈಲಿಯ ಅತ್ಯಂತ ಉನ್ನತ ಮಟ್ಟವನ್ನು ವಿವರಿಸುತ್ತವೆ. ದಕ್ಷಿಣ ಭಾರತದ ಶೈಲಿಯ ಪ್ರಭಾವ ಇಲ್ಲಿ ಎದ್ದು ಕಾಣುತ್ತದೆ. ಈ ಎರಡು ದೇವಸ್ಥಾನಗಳಿಗಿಂತ ಅರ್ಧಶತಮಾನ ಪೂರ್ವದಲ್ಲಿ ನಿರ್ಮಾಣವಾದುದು ಸಂಗಮೇಶ್ವರ ದೇವಾಲಯ, ಇಲ್ಲಿ ಸಾಕಷ್ಟು ಕೆಲಸ ಅಪೂರ್ಣವಾಗಿದೆ. ಗೋಡೆಗಂಬಗಳಲ್ಲಿ ಕೆತ್ತಲಾಗಿರುವ ಅಂಕಣಗಳು, ರಂಧ್ರಗಳನ್ನು ಕೊರೆಯಲಾಗಿರುವ ಶಿಲಾಕಿಟಕಿಗಳು, ಮೂರ್ತಿಶಿಲ್ಪಗಳಿಂದ ತುಂಬಿಕೊಂಡಿದ್ದರೂ ಅಪೂರ್ಣತೆಯ ಕೊರತೆ ಕಾಣಿಸುತ್ತದೆ. ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ದೇವಾಲಯಗಳಲ್ಲಿಯೂ ಇದೇ ರೀತಿಯ ಕಾರ್ಯವೈಖರಿಯನ್ನು ಕಾಣುತ್ತೇವೆ. ಮಲಪ್ರಭಾ ನದಿಯಿಂದ ವಿರೂಪಾಕ್ಷ ದೇವಾಲಯದೊಳಗೆ ಪ್ರವೇಶಿಸುವಾಗ ಪೂರ್ವದಿಕ್ಕಿನ ಪ್ರವೇಶದ್ವಾರದ ಮೇಲೆ ಮಿಥುನ ದೃಶ್ಯಗಳು ಕಾಣುತ್ತಿದ್ದು, ಅವುಗಳ ಮೇಲ್ಗಡೆ ಶಿಲ್ಪಿಯ ಹೆಸರಿನೊಂದಿಗೆ ಶಿಲಾಶಾಸನಗಳು ಕಾಣಿಸುತ್ತವೆ. ಒಳಗಿನ ವಿಶಾಲವಾದ ಪ್ರಾಂಗಣದಲ್ಲಿ ನಂದಿ ಅಲಂಕಾರ ಮಂಟಪವಿದ್ದು, ಹೊರಗಿನ ಗೋಡೆಗಳ ಮೇಲೆ ಅನೇಕ ಮೂರ್ತಿಗಳನ್ನು ಕಂಡರಿಸಲಾಗಿದೆ. ನಾಲ್ಕು ದಿಕ್ಕಿನ ಪ್ರತಿಯೊಂದು ದ್ವಾರಬಂಧದ ಕಂಬ ತೋಳುಗಳ ಮೇಲೆಯೂ ಮಿಥುನ ಜೋಡಿಗಳು, ಎತ್ತರದ ತೆಳುಕಾಯದ ಒಂಟಿ ಹೆಂಗಸರ ಶಿಲಾಮೂರ್ತಿಗಳು ಅಲಂಕರಿಸುತ್ತವೆ. ಇವೆಲ್ಲವುಗಳಿಗಿಂತಲೂ ಒಂದು ಕಂಬದ ಹತ್ತಿರ ಕೈಯಲ್ಲೊಂದು ಹಕ್ಕಿಯನ್ನು ಹಿಡಿದುಕೊಂಡು ನಿಂತಿರುವ ಒಬ್ಬ ಮಹಿಳೆಯ ಮೂರ್ತಿಶಿಲ್ಪ ತುಂಬಾ ಸುಂದರವಾಗಿ ಮೂಡಿಬಂದಿದೆ. ನಂದಿ ಮಂಟಪದ ಹೊರಗೋಡೆಯ ಮೇಲೆ ಮತ್ತೊಬ್ಬ ಮಹಿಳೆಯು ಕೊಡೆಯ ಹಾಗೆ ಇರುವ ತಟ್ಟೆಯೊಂದನ್ನು ತಲೆಯ ಮೇಲೆ ಹಾಕಿಕೊಂಡಿರುವುದು ಕಾಣಿಸುತ್ತದೆ. ಈ ದೃಶ್ಯ ಬೇರೆಲ್ಲೂ ಕಾಣದ ಅಪರೂಪದ್ದಾಗಿದೆ. ವಿರೂಪಾಕ್ಷ ದೇವಾಲಯದ ಒಳಗೂ, ಹೊರಗೂ ಗೋಡೆಗಳ ಮೇಲೆ, ಮುಖ ಮಂಟಪದಲ್ಲಿ ಅನೇಕ ಮೂರ್ತಿಶಿಲ್ಪಗಳಿವೆ. ಪೂರ್ವದಿಕ್ಕಿನ ಗೋಡೆಯಲ್ಲಿ ಲಿಂಗೋದ್ಭವಮೂರ್ತಿ ಮತ್ತು ದಕ್ಷಿಣಗೋಡೆಯಲ್ಲಿ ನೃತ್ಯಮೂರ್ತಿ ಶಿವ, ನರಸಿಂಹ ಹಾಗೂ ಹಿರಣ್ಯಕಶ್ಯಪು ಮತ್ತು ಜಟಾಯು ರಾವಣನ ಮೇಲೆ ದಾಳಿ ಮಾಡುವ ಪ್ರಸಂಗಗಳನ್ನು ಮೂರ್ತಿ ಶಿಲ್ಪಗಳಿಂದ ಸೊಗಸಾಗಿ ವಿವರಿಸಲಾಗಿದೆ. ಉತ್ತರ ದಿಕ್ಕಿನ ಗೋಡೆಯ ಮೇಲಿರುವ ಶಿಲ್ಪಗಳನ್ನು ಚೆನ್ನಾಗಿ ಕಾಯ್ದು ಕೊಳ್ಳಲಾಗಿದೆ. ಇವುಗಳಲ್ಲಿ ಉತ್ತಮವಾದವು ಎಂದರೆ ವೃಷಭ ವಾಹನನು ಮತ್ತು ಹರಿಹರನು. ಗೋಡೆಗಳ ಗೂಡುಗಳಲ್ಲಿ, ಗೋಡೆಗಂಬಗಳಲ್ಲಿ, ಬಾಗಿಲು ಕಿಟಕಿಗಳ ಚೌಕಟ್ಟುಗಳ ಸುತ್ತಲೂ ವರಾಹನ ಮೇಲೆ ಕುಳಿತಿರುವ ವಿಷ್ಣು ಮತ್ತು ತ್ರಿವಿಕ್ರಮನ ಅವತಾರಗಳ ಪ್ರತಿಮೆಗಳನ್ನು ಕೊರೆಯಲಾಗಿದೆ. ಪೂರ್ವ, ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ದೇವಾಲಯಕ್ಕೆ ಹೊಂದಿಕೊಂಡೇ ದ್ವಾರಮಂಟಪಗಳಿವೆ. ಪ್ರತಿಯೊಂದು ಮಂಟಪದ ಇಕ್ಕೆಲಗಳಲ್ಲಿರುವ ದ್ವಾರಪಾಲಕ ಮಗ್ಗುಲಿಗೆ ತಿರುಗಿದು ಕಾಲನ್ನು ಮಡಿಚಿದ್ದಾನೆ. ಈ ತೆರನ ಭಂಗಿ ನಮಗೆಲ್ಲಿಯೂ ದೊರೆಯಲಾರದು. ಅವನ ಕೈಯಲ್ಲಿರುವ ಗದೆಯನ್ನು ಒಂದು ಹಾವು ಸುತ್ತಿಕೊಂಡಿದೆ, ಕಿರೀಟ ಮತ್ತು ಹಲವಾರು ಆಭರಣಗಳು ಅವನಿಗೆ ಒಂದು ವಿಶಿಷ್ಟವಾದ ಪ್ರಾಮುಖ್ಯತೆ ನೀಡುತ್ತದೆ. ಪೂರ್ವದ ದ್ವಾರದಲ್ಲಿ ಹಲವಾರು ದ್ವಾರಪಾಲಕರು ಆಭರಣಗಳಿಂದ ಅಲಂಕೃತರಾಗಿದ್ದು ತಮ್ಮ ಗದೆಗಳನ್ನು ನೆಲಕ್ಕೆ ಊರಿ ಅದರ ಆಸರೆಯಲ್ಲಿ ಬಾಗಿ ನಿಂತಿದ್ದಾರೆ. ಉತ್ತರ ದಿಕ್ಕಿನ ದ್ವಾರದ ದ್ವಾರಪಾಲಕರಿಬ್ಬರು ನಾಲ್ಕು ಕೈಗಳನ್ನು ಹೊಂದಿದ್ದು ಕಿರೀಟ, ಆಭರಣಗಳನ್ನು ಧರಿಸಿರುವರು. ಯಜ್ಞೋಪವೀತಕ್ಕೂ ವಜ್ರಗಳನ್ನು ಹೊಂದಿಸಲಾಗಿದೆ. ಅಲಂಕಾರಗೊಂಡ ಅವರ ಗದೆಗಳನ್ನಾಶ್ರಯಿಸಿ ನಿಂತಿರುವರು. ಎಡಗಡೆ ನಿಂತಿರುವವರು ಒಂದು ಕಾಲಮೇಲೆ ನಿಂತಿದ್ದಾನೆ. ಮತ್ತೊಂದು ತುಸು ಮೇಲಕ್ಕೆತ್ತಿದ್ದು, ಆ ಭಾಗ ಈಗ ಮುರಿದಿದೆ. ಈ ಇಬ್ಬರು ದ್ವಾರಪಾಲಕರು ನೋಡುಗರನ್ನು ಚಕಿತಗೊಳಿಸುತ್ತಾರೆ. ಎಲ್ಲಾ ದ್ವಾರಪಾಲಕರ ಮೂರ್ತಿಶಿಲ್ಪಗಳು ಉತ್ತಮ ಕಲಾವಿದರ ಕೊಡುಗೆಗಳಾಗಿವೆ.



ಐಹೊಳೆ ದೇವಾಲಯ

ಮಲ್ಲಿಕಾರ್ಜುನ ದೇವಾಲಯವು ವಿರೂಪಾಕ್ಷನ ದೇವಾಲಯಕ್ಕಿಂತ ಕಲೆಯ ದೃಷ್ಟಿಯಿಂದ ಹೆಚ್ಚು ಸುಂದರವಾಗಿದೆ. ಮುಖದ್ವಾರದ ದ್ವಾರಪಾಲಕರು, ಸ್ತಂಭಗಳ ಮೇಲಿನ ಉಬ್ಬುಚಿತ್ರಗಳು, ಕೆತ್ತಲ್ಪಟ್ಟ ತೊಲೆಗಳು ಮತ್ತು ಒಳಮಾಳಿಗೆಯ ಅಂಕಣಗಳು - ಇವೆಲ್ಲವೂ ಶಿಲ್ಪಕಲಾವಿದರ ಬಹುಮುಖ ಸಾಮರ್ಥ್ಯ ವನ್ನು ಪ್ರದರ್ಶಿಸುವುದಲ್ಲದೆ ಪಶ್ಚಿಮ ಚಾಲುಕ್ಯರ ಶಿಲ್ಪಕಲೆಯ ಮಹತ್ಸಾಧನೆಯನ್ನು ಸಾರುತ್ತವೆ. ಆದರೆ ಹೊರಗಿನ ಗೋಡೆಗಳ ಮೇಲಿನ ಅಂಕಣಗಳು ಕೆತ್ತನೆಯ ದೃಷ್ಟಿಯಿಂದ ವಿರೂಪಾಕ್ಷ ದೇವಾಲಯದ ಅಂಕಣ

ಗಳಿಗಿಂತಲೂ ಗುಣದಲ್ಲಿ ತುಸು ಕಳಪೆಯೆನಿಸುವುದರಲ್ಲಿ ಸಂಶಯವಿಲ್ಲ.

ತುಸು ದೂರದಲ್ಲಿರುವ ಪಾಪನಾಥ ದೇವಾಲಯವು ಉತ್ತರ ಭಾರತೀಯ ಸಂಪ್ರದಾಯಕ್ಕನುಗುಣವಾಗಿ ನಿರ್ಮಿಸಲ್ಪಟ್ಟಿದೆ. ಹೊರಗೋಡೆಗಳಲ್ಲಿ ರಾಮಾಯಣದ ದೃಶ್ಯಗಳನ್ನು ಕೆತ್ತಲಾಗಿದೆ. ಖರದೂಷಣರೊಂದಿಗೆ ರಾಮಲಕ್ಷ್ಮಣರು ಕಾದಾಡುವುದು, ರಾಮ ರಾವಣರ ಯುದ್ಧ ಮತ್ತು ಕೆಳಗೆ ಕನ್ನಡ ಲಿಪಿಯ ಶಿಲಾಶಾಸನಗಳನ್ನು ಪ್ರತಿ ಅಂಕಣದಲ್ಲೂ ಕೆತ್ತಲಾಗಿದೆ. ಶಿವನ ತಾಂಡವ ನೃತ್ಯವನ್ನು ಪ್ರತಿದ್ವಾರದಲ್ಲೂ ರಚಿಸಲಾಗಿದೆ. ಸ್ತಂಭಗಳ ಮೇಲೆ ಗಜೇಂದ್ರ ಮೋಕ್ಷ, ತ್ರಿಪುರಾಂತಕ ಮೂರ್ತಿಗಳ ಪ್ರತಿಮೆಗಳನ್ನು ಕಂಡರಿಸಲಾಗಿದೆ. ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ದೇವಾಲಯಗಳಿಗಿಂತಲೂ ಇದು ತುಂಬಾ ಸರಳವಾಗಿದೆ. ಗೋಡೆಗಂಬಗಳನ್ನು ಮಿಥುನ ದೃಶ್ಯಗಳಿಂದ ಅಲಂಕರಿಸಲಾಗಿದೆ. ವೀಣೆ ಮತ್ತು ಕೊಳಲು ನುಡಿಸುವವರನ್ನು ಕೆತ್ತಲಾಗಿದೆ.

ಮೊದಲ ಪಶ್ಚಿಮ ಚಾಲುಕ್ಯರ ಪ್ರಭಾವವು ಎಲ್ಲಿಯವರೆಗೆ ಹರಡಿತ್ತು ಎಂದು ಹೇಳುವುದು ತುಸು ಕಷ್ಟ. ಆದರೆ ಇವರ ನಂತರ ಬಂದ ರಾಷ್ಟ್ರಕೂಟರು ಚಾಲುಕ್ಯರ ಪ್ರದೇಶವನ್ನು ಗೆದ್ದುಕೊಂಡಾಗ ವಿರೂಪಾಕ್ಷ, ಮಲ್ಲಿಕಾರ್ಜುನ ದೇವಾಲಯಗಳ ಸೌಂದರ್ಯ, ಕಲಾಪ್ರೌಢಿಮೆ ಅವರನ್ನು ಬೆರಗುಗೊಳಿಸುವುದಲ್ಲದೆ ಮುಂದೆ ಎಲ್ಲೋರಾದ ಕೈಲಾಸ ದೇವಾಲಯದ ನಿರ್ಮಾಣಕ್ಕೆ ಮಾದರಿಯೆನಿಸಿದವು. ಇಂದಿಗೂ ಚಾಲುಕ್ಯರ ಶಿಲ್ಪಕಲಾ ಶೈಲಿಯು ಇತರ ಶೈಲಿಗಳಿಂದ ಪ್ರತ್ಯೇಕಗೊಂಡಿರುವುದಲ್ಲದೆ, ನಂತರದ ಶಿಲ್ಪಕಲಾವಿದರಿಗೆ ಪ್ರೇರಕ ಶಕ್ತಿಯಾಗಿ ಉತ್ತೇಜಿಸಿತು ಎಂದು ನಿಸ್ಸಂಕೋಚವಾಗಿ ಹೇಳಬಹುದು.

### ರಾಷ್ಟ್ರಕೂಟರು

ರಾಷ್ಟ್ರಕೂಟ ಅರಸುವಂಶಜರು (ಕ್ರಿ.ಶ. ೮ರಿಂದ ೧೦ನೇ ಶತಮಾನ) ಬಾದಾಮಿಯ ಚಾಲುಕ್ಯರ ಸಾಮಂತರಾಗಿದ್ದರು. ಕ್ರಿ.ಶ. ೭೫೦ರಲ್ಲಿ ಈ ವಂಶದ ಪ್ರಸಿದ್ಧವಾದ ದಂತಿದುರ್ಗನು ಚಾಲುಕ್ಯರನ್ನು ಸೋಲಿಸಿ ಅವರ ಬಹುಪಾಲು ಭೂಪ್ರದೇಶವಲ್ಲದೆ ಸುತ್ತಲಿನ ಪ್ರದೇಶಗಳನ್ನು ಕೂಡ ಆಕ್ರಮಿಸಿಕೊಂಡನು. ದಖ್ಖನ ಪ್ರಮುಖ ಅರಸು ವಂಶಜರಲ್ಲಿ ದಂತಿದುರ್ಗನ ಚಾಣಾಕ್ಷ ನಾಯಕತ್ವದಲ್ಲಿ ರಾಷ್ಟ್ರಕೂಟರು ಆಡಳಿತಗಾರರಾದರು. ಇವರು ಶೈವಧರ್ಮದ ಪುನರುಜ್ಜೀವನ ಪ್ರಾರಂಭಿಸಿದರು. ಎಲ್ಲೋರಾ ಮತ್ತು ಎಲಿಫೆಂಟಾ ಗುಹಾಂತರ ದೇವಾಲಯಗಳ ನಿರ್ಮಾಣ ಇವರ ಶೈವ ಧರ್ಮದ ಮೇಲಿನ ಒಲವನ್ನು ಸಾರಿ ಹೇಳುತ್ತದೆ. ಮೊದಲನೇ ಕೃಷ್ಣನ ಕಾಲದಲ್ಲಿ ನಿರ್ಮಾಣಗೊಂಡ ಕೈಲಾಸ ದೇವಾಲಯವು ಇಂದಿಗೂ ಅತ್ಯುತ್ತಮ ಸ್ಮಾರಕವಾಗಿ ಕಂಗೊಳಿಸುತ್ತಿದೆ. ಈ ದೇವಾಲಯವನ್ನು ಸಂಪೂರ್ಣ ಬಂಡೆಗಲ್ಲಿನಿಂದಲೇ ಕೆತ್ತಲ್ಪಟ್ಟಿದೆ. ಇತರ ದೇವಾಲಯಗಳಾದ ದಶಾವತಾರ, ಲಂಕೇಶ್ವರ ಮತ್ತು ರಾಮೇಶ್ವರ ದೇವಾಲಯಗಳಲ್ಲಿ ಅನೇಕ ಪ್ರಸಿದ್ಧ ಶಿಲ್ಪಾಕೃತಿಗಳು ಸಿಗುತ್ತವೆ. ಎಲ್ಲೋರಾ ಮತ್ತು ಎಲಿಫೆಂಟಾಗಳಲ್ಲಿ ಕಲ್ಲುಬಂಡೆಗಳನ್ನು ಕೊರೆದು ನಿರ್ಮಾಣಗೊಳಿಸಿದ ದೇವಾಲಯಗಳು ಅನೇಕ ಶತಮಾನದ ಶಿಲ್ಪಕಲೆಯ ಅದ್ಭುತ ಕೊಡುಗೆಗಳಾಗಿವೆ. ಎಲ್ಲೋರಾದ ಕೈಲಾಸ ದೇವಾಲಯವು ದಖ್ಖನ ವಿಶೇಷ ಸಂಪ್ರದಾಯ ಶಿಲ್ಪಕಲೆಯ ಮಾದರಿ ಎನಿಸಿದೆ. ದಕ್ಷಿಣ ಭಾಗದ ಶಿಲ್ಪಕಲಾ ಸೊಬಗು ಇಲ್ಲಿಯವರೆಗೆ ಅಡಗಿಕೊಂಡಿದ್ದು, ಈ ಶತಮಾನದಲ್ಲಿ ದಿಢೀರನೆ ತನ್ನ ಎಲ್ಲಾ ಶಕ್ತಿ, ಸೂಕ್ಷ್ಮತೆಗಳನ್ನು ಹೊರಬಂದಿದೆಯೇನೋ ಎಂಬಂತೆ ಈ ದೇವಾಲಯಗಳು ಇಂದಿಗೂ ಸಾಕ್ಷಿಯಾಗಿ ನಿಂತಿವೆ. ಹಲವಾರು ಕಥಾ ಸಂದರ್ಭಗಳನ್ನು ಕಲ್ಲಿನಲ್ಲಿ ಕೆತ್ತನೆ ಮಾಡಿ ಸಂಯೋಜಿಸಿದ ರೀತಿ ಶಿಲ್ಪಕಲಾ ಜಗತ್ತಿನಲ್ಲಿಯೇ ಇಂತಹ ಮತ್ತೊಂದು ಮಾದರಿ ಸಿಗಲಿಕ್ಕಿಲ್ಲವೆಂದು ಹೇಳಬಹುದು. ಜೀವನದಲ್ಲಿ ನಾವು ಅನುಭವಿಸಬಹುದಾದ ವಿವಿಧ ಮನೋಭಾವಗಳು, ಪ್ರತಿಕ್ರಿಯೆಗಳನ್ನು ಶಿಲೆಯಲ್ಲಿ ಜೀವಂತವಾಗಿ ಪ್ರದರ್ಶಿಸಲಾಗಿದೆ. ನಿಷ್ಕಾಮಪ್ರೇಮ, ವಿನಾಶಕಾರೀ ಉದ್ರೇಕ ಮುಂತಾದ ಭಾವನೆಗಳನ್ನು ರಚನಾತ್ಮಕ ವಾಸ್ತವತೆಗೆ ಇಳಿಸಲಾಗಿದೆ. ರಚನೆಗಳ ಮೇಲೆ ಬುದ್ಧಿವಂತಿಕೆಯಿಂದ ಪ್ರಯೋಗಿಸಿದ ನೆರಳು, ಬೆಳಕಿನ ಸಂಯೋಜನೆ, ನೋಡುಗರಿಗೆ ಭಾವನೆಗಳ ನೈಜ ಪರಿಣಾಮವು ಕಾಣಸಿಗುತ್ತದೆ. ದಖ್ಖನಲ್ಲಿ ಶಿಲಾಕೊರೆತ ಸಂಪ್ರದಾಯದಲ್ಲಿ ಶತಮಾನಗಳಿಂದ ನಡೆಸಿದ ಅನೇಕ ಪ್ರಯೋಗಗಳ ಪರಿಣಾಮವಾಗಿ ಪಡೆದುಕೊಂಡ ಅನುಭವ ಎಲ್ಲೋರಾದ ಏಕಶಿಲಾ ಕೈಲಾಸ ದೇವಾಲಯ ನಿರ್ಮಾಣದಲ್ಲಿ ಶಿಲ್ಪಕಲೆಯು ತನ್ನ ಉಚ್ಛ್ರಾಯ ಸ್ಥಿತಿಯನ್ನು ತಲುಪಿದೆಯೆಂದು ಹೇಳಬಹುದು.

ಕೈಲಾಸ ದೇವಾಲಯ ಕೆತ್ತನೆಗಳು (ವಿಶೇಷವಾಗಿ ೧೬ನೇ ಗುಹೆಯ) ಈ ಅವಧಿಯ ಅತ್ಯಂತ ವಿಶಿಷ್ಟ ಮಾದರಿಯೆನಿಸಿವೆ. ಉದಾಹರಣೆಗೆ ಅತ್ಯಂತ ಉತ್ಕೃಷ್ಟವಾಗಿ ಕೊರೆಯಲ್ಪಟ್ಟ ಎರಡು ಏಕಶಿಲಾ ಧ್ವಜಸ್ತಂಭಗಳು ಶಿವನ ತ್ರಿಶೂಲದೊಂದಿಗೆ ನಂದಿಮಂಟಪದ ಪ್ರವೇಶದಲ್ಲಿ ನಿಂತಿವೆ. ನಂದಿಮಂಟಪದ ಗೋಡೆಗಳ ಮೇಲೆ ರಾಮಾಯಣದ ಕೆಲವು ದೃಶ್ಯಗಳನ್ನು ಕೊರೆಯಲಾಗಿದೆ. ಎತ್ತರವಾದ ತಳದಲ್ಲಿ ದಷ್ಟಪುಷ್ಟವಾದ ಸಿಂಹಗಳು, ಆನೆಗಳನ್ನು ರಚಿಸಲಾಗಿದೆ. ಇವುಗಳನ್ನು ರಚಿಸುವ ಭಂಗಿ ನೋಡಿದರೆ ಹಿಂದೆ ಇರುವ ಕೈಲಾಸ ದೇವಾಲಯದಂತಹ ಪವಿತ್ರ ಸೌಧವನ್ನು ತಾವೇ ಹೊತ್ತು ನಿಂತಿರುವ ಹಾಗೆ ಭಾಸವಾಗುತ್ತದೆ. ಈ ದೇವಾಲಯದ ಸುತ್ತಲೂ ನಿರ್ಮಿಸುವ ಗೂಡುಗಳಲ್ಲಿ ರಾವಣನು ಪರ್ವತವನ್ನು ಅಲುಗಾಡಿಸುವ ಶಿಲ್ಪದಲ್ಲಿ ಸೀತಾಪಹರಣದ ಅಪರಾಧಕ್ಕಾಗಿ ಪಾತಾಳದಲ್ಲೊಂದು ಗವಿಯಲ್ಲಿ ಬಂಧಿಸಲ್ಪಟ್ಟಿರುವ ಹತ್ತು ತಲೆಗಳುಳ್ಳ ರಾವಣನು ಕೈಲಾಸ ಪರ್ವತವನ್ನೇ ಅಲುಗಾಡಿಸುವಂತೆ ರಚಿಸಲಾಗಿದೆ. ಕೈಲಾಸ ಶಿಖರದಲ್ಲಿ ಎಲ್ಲಾ ದೇವತೆಗಳಿಗಿಂತ ಎತ್ತರದಲ್ಲಿ ಅಂದರೆ ದೇವರುಗಳ ದೇವ ಎಂದು ಶಿವನನ್ನು ತೋರಿಸಲಾಗಿದೆ. ತನ್ನ ಇಪ್ಪತ್ತು ಕೈಗಳಿಂದ ರಾವಣನು ಶಿವನು ಕುಳಿತಿರುವ ಕೈಲಾಸ ಪರ್ವತವನ್ನು ನಾಶಮಾಡಬೇಕೆಂದು ತನ್ನ ಎಲ್ಲಾ ಶಕ್ತಿಯನ್ನು ಉಪಯೋಗಿಸುತ್ತಿರುವನು. ಜಗತ್ತನ್ನು ನಾಶ ಮಾಡಬೇಕೆಂದು ಪ್ರಯತ್ನಿಸುವ ದುಷ್ಟಶಕ್ತಿಗಿಂತ ನಾಶರಹಿತ ದೈವಿಕ ಪ್ರಶಾಂತತೆಯೇ ಶ್ರೇಷ್ಠ ಎಂಬುದನ್ನು ಈ ಉಬ್ಬು ಚಿತ್ರದಲ್ಲಿ ಶಿಲ್ಪಿಯು ಮಾರ್ಮಿಕವಾಗಿ ಪ್ರದರ್ಶಿಸಿದ್ದಾನೆ. ಶಿವನು ಯಾವ ಮಾನಸಿಕ ಪ್ರತಿಕ್ರಿಯೆ ಇಲ್ಲದೇ ಸುಮ್ಮನೆ ತನ್ನ ಒಂದು ಕಾಲನ್ನು ನೆಲಕ್ಕೆ ತುಸು ಒತ್ತುತ್ತಾನೆ. ರಾವಣನ ಶಕ್ತಿಯನ್ನು ಹುಸಿ ಮಾಡಲು ಇಷ್ಟೇ ಸಾಕು ಭಗವಂತನಿಗೆ. ಭೂಮಿ ಕಂಪಿಸುತ್ತದೆ. ಪಾರ್ವತಿಯು ಭಯದಿಂದ ಶಿವನ ಕಡೆಗೆ ವಾಲುತ್ತಾಳೆ. ಪಾರಿಚಾರಿಕೆಯು ಹೆದರಿ ಓಡುತ್ತಾಳೆ. ಇಷ್ಟೆಲ್ಲವನ್ನು ಆ ಉಬ್ಬುಚಿತ್ರದಲ್ಲಿ ರಚಿಸಿದ್ದು, ಕಥಾ ಪ್ರಸಂಗಕ್ಕೆ ಕಲೆಯ ಮೆರುಗನ್ನು ಕೊಡಲಾಗಿದೆ. ಈ ದೃಶ್ಯದಲ್ಲಿ ಪಾತ್ರಧಾರಿಗಳ ಮುಖ ಭಾವಕ್ಕಿಂತಲೂ ಅದರ ಹಾವಭಾವಗಳೇ ಹೆಚ್ಚು ವಿವರಿಸುತ್ತವೆ.

ರಾವಣ ಮತ್ತು ಜಟಾಯು ನಡುವೆ ಜರುಗಿದ ಕದನವನ್ನು ಕೂಡ ಪರಿಣಾಮಕಾರಿಯಾಗಿ ಮೂರ್ತಿ ಶಿಲ್ಪದ ಮೂಲಕ ತಿಳಿಸಿದೆ. ಜಟಾಯು ರಾವಣನೊಂದಿಗೆ ಕಾದಾಡಿದರೂ, ಕೊನೆಗೆ ಆ ರಾಕ್ಷಸನ ಕತ್ತಿಗೆ ಬಲಿಯಾದ ಈ ಶಿಲ್ಪದಲ್ಲಿ ಸೀತೆಯು ಭಯವಿಹ್ವಲಳಾಗಿ ರಥದಲ್ಲಿ ಕುಗ್ಗಿ ನಿಂತಿದ್ದಾಳೆ. ಆಕೆಯ ಆಕಾರ ಶಿಥಿಲಗೊಂಡಿದ್ದರೂ, ನಿಂತಿರುವ ಭಂಗಿ ಆಕೆಯ ಮನಃಸ್ಥಿತಿಯನ್ನು ವಿವರಿಸುತ್ತದೆ. ರಾವಣನ ಆಕಾರವನ್ನು ದೊಡ್ಡದಾಗಿ ತೋರಿಸಲಾಗಿದೆ. ಒಂದು ಕಡೆ ಜಟಾಯು ರಾವಣನ ಮೊಳಕಾಲನ್ನು ಕುಕ್ಕುತ್ತಿರುವುದನ್ನೂ, ರಾವಣನು ರಥವನ್ನು ವೇಗವಾಗಿ ಓಡಿಸುವುದನ್ನೂ ಹೇಳುವಂತೆ ಈ ಉಬ್ಬು ಚಿತ್ರವನ್ನು ಸುಂದರವಾಗಿ ಕೆತ್ತಲಾಗಿದೆ.

ಕೈಲಾಸ ದೇವಾಲಯ ಹೊರಗಿನ ಗೋಡೆಯಲ್ಲಿ ತ್ರಿಪುರಾಂತಕ ಮೂರ್ತಿಯ ಶಿಲ್ಪವನ್ನು ಕಾಣುತ್ತೇವೆ. ಶಿವನು ಮೂವರು ಅಸುರರ ಕೋಟೆಗಳನ್ನು ನಾಶ ಮಾಡುತ್ತಾನೆ. ಶಿವನು ರಥದಲ್ಲಿ ನಿಂತಿದ್ದು, ಬ್ರಹ್ಮನು ಸಾರಥಿಯಾಗಿದ್ದಾನೆ. ವಿಷ್ಣು ಬಿಳಿ ಎತ್ತಿನ ರೂಪದಲ್ಲಿ ರಥದ ಚಲನೆಯನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸುತ್ತಾನೆ. ಈ ಮೂರ್ತಿ ಶಿಲ್ಪವು ಸಂಪೂರ್ಣವಾಗಿ ದಖ್ಖನ ಸಾಂಪ್ರದಾಯವನ್ನು ಎತ್ತಿತೋರಿಸುತ್ತದೆ. ಮತ್ತೊಂದು ಉಬ್ಬು ಚಿತ್ರ ಮಹಿಷಾಸುರ ಮರ್ದಿನಿಯ ಕುರಿತದ್ದಾಗಿದ್ದು ಎಲ್ಲೋರಾದ ಶಿಲ್ಪ ಸಂಪತ್ತಿಗೆ ಸಾಕ್ಷಿಯಾಗಿದೆ.

(ಪುಟ 12ಕ್ಕೆ)

# VALUES THAT MAKE LIFE MEANINGFUL

*- M.A.N.Prasad*

Most history books tell us that Columbus discovered in America in 1492. They tell us very little about the Native Americans who numbered around 75 million at that time. These Native Americans had been living on that land since thousands of years and were having nearly 2000 different languages of their own and a rich oral tradition and culture.

Recent scientific studies using DNA markers have shown that the Native Americans inhabited that land since the past 40,000 years, if not more. This is in line with what the Native American has always known and believed in, that they have been there since the beginning.

The ' discovery ' by Columbus marked the beginning of a struggle between the two highly developed but mutually antagonistic cultures of the invading Europeans and the Native Americans. The invading Europeans, with the typical arrogance of an invader, believed strongly, albeit blindly, that the Native Americans were less than human and a threat to the civilized Christian society. They mercilessly encroached upon the land belonging to the Natives. The Native Americans had no choice but to leave that land and move out or die.

To the Native American who was deeply spiritual, the land was sacred and linked to their spirituality and identity. It could not be owned. When the white man spoke of owning the land, it was some thing that they could not understand. In the words of an elder of Native Americans " then some thing happened that we don't understand. The people who came said that we don't belong here any more. That there was a chief in Washington ... and the land was his, and he said that they could live here and we could not. We thought these people were insane.... These people would ride across the land and put a flag up, then they say that every thing between where they started and where they put their flag up belonged to them.... That was like some one shooting an arrow into sky and saying that all the sky up to where the arrow went belonged to him."

Over the years, the Native American was forced out of his land, was either killed or fell victim of diseases or was herded into reservations - a euphemistic term for a concentration camp. The invading Europeans were brutally blind and oblivious to the devastation they were causing to the civilization and culture of Native Americans, which had been built over thousands of years. According to some historians, this activity reached its zenith during 1860 and 1890 marking the near total destruction of the culture and civilization of the Native Americans.

In the 20th century, the number of Native Americans had dwindled down from 70 million to 0.25 million. Most of them were living in reservations. The squalid living conditions in the reservations and unemployment had resulted in low morale and high alcoholism and suicide rate among them. They were denied the rights to govern or manage their own affairs. They could not even practice their own religion, till the Freedom of Religion Act was enacted in 1978.

Despite all this, the culture of Native Americans is showing a profound resurgence. Like a giant tree that has withstood a hurricane, the Native American has withstood all the oppression over the years and remained unbent. This ability to sustain has made many non-natives in America to sit back and think. They have started looking up to the Native American traditions for the spiritual sustenance, which is possibly lacking in their own culture.

World over, we can see that great old civilizations have sustained the onslaught of oppressors and survived. What is the factor that allows these civilizations to survive and continue despite these adverse conditions? The factor common to all these civilizations is their enduring spiritual value that has been kept alive in their people. Lets look at some of the spiritual values of the Native American civilization.

Explaining who is a typical Native American, Yellowtail - the chief medical man of the Crow nation - says that he is an individual who has self-esteem in the sacred way of life and follows the straight path in every thing. He tries to do things right and is not greedy. He will want enough to live on and that's all that an Indian cares for. He shares with his fellow men whatever he has been given. He is not rich in terms of possessing wealth or money, but is rich in spiritual wealth, which is more important. For the Native American, sacred way of life is practiced every living minute and there is no other way of living. Every aspect of life is " wakan " or sacred and the Native American's life is soaked in spirituality. They believe that even the smallest animals or things in day to day life could be of importance and could teach them great things. Often we look towards big things and tend to over look small things. Doing each act with proper attention and respect is the way to show respect for the Creator and his creations.

The Native Americans believe that all things are a part of an incomprehensible totality. This was always there and will be always there. This incomprehensible is referred to by so many terms like the Wakan Tanka, Taiowa, Kehoe Manitu, Acbadadea, etc. by different people. Many of these terms are untranslatable and the often used terms like God, Creator, Great Spirit etc., really are unable to convey the real import of these terms. The Native American feels that this is a limitation of the English language. Wakan Tanka is explained as all that is wondrous, awesome, powerful, infinite, compassionate, tender, and loving. He is both personal and impersonal, with and without attributes, and resides in every heart. In order to know him and realize him one needs to be pure and good, and live in the sacred way.

The Native American draws his strength from prayer. Prayer is the duty of every Native American, as it is the daily recognition of the Unseen or the Eternal. The prayer could be of different kinds. Like the prayer in the morning in which one stands in silence before the sun, or the spontaneous prayer, which greets the beauty of the world through out the day, or prayers seeking the welfare of others. There are also prayers that are accompanied by sacred ceremonies. When a Native American includes all his relations in his prayer, the term is used in its broadest sense and includes all living beings and inanimate things, past, present and yet

to come. To attain a complete union with the 'Wakan' one has to continuously keep praying, during his various activities. The more one immerses himself in such prayer, the more he receives the strength and guidance to complete his tasks and feel fulfilled.

To a Native American all forms of life are of importance and command his respect and reverence. This belief lead to some kind of kinship with all creatures and love and kindness towards them. Another aspect that is held in high esteem by the Native Americans is generosity. Putting other people before yourself and giving away things to others on occasions are common in this culture. Love of possessions is considered a weakness, which should be overcome.

Native Americans believe profoundly in silence. Needless talk is considered a weakness of character. The holy silence is believed to be the God's voice. Silence is supposed to give the observer of silence self control, true courage, endurance, patience, dignity and reverence. Silence is considered the corner stone of character. No wonder the white folks thought that these natives were dumb.

Truth is considered as a great protector by the Native American. His silence is deeply connected with truth and honour. He firmly believes that one requires few words to speak the truth. Telling a lie is the blackest sin. They strongly believe that the truth always prevails, no matter how long it may take. They have scant regard for material things and feel that their contribution has been in the spiritual realm.

When asked what it is to be like a Native American, one of their elder put it very succinctly:

* Live close to earth
* Get rid of some of your things
* Help each other
* Talk to the Creator
* Be quiet more
* Listen to the earth, instead of building things on it all the time

Here is something for all of us to learn.

Acknowledgement: Values - Published by Sri Ramakrishna Math, Madras - 600 004

## ಸುತ್ತಮುತ್ತ

### ವಿಜಯಾ ಬ್ಯಾಂಕ್ ವಡಾಲ ಶಾಖೆಯ ಸ್ಥಳಾಂತರ

ವಡಾಲದ ಕಿದ್ವಾಯಿ ಮಾರ್ಗದಲ್ಲಿ 1972ರಿಂದ ಕಾರ್ಯ ನಿರ್ವಹಿಸುತ್ತಿದ್ದ ವಿಜಯಾಬ್ಯಾಂಕ್ ತನ್ನ ಶಾಖಾ ಕಚೇರಿಯನ್ನು ವಡಾಲದ ಇಂದೂಲಾಲ್ ಡಿ. ಭುವಾ ಮಾರ್ಗದಲ್ಲಿರುವ ರಾಷ್ಟ್ರೀಯ ಕನ್ನಡ ಶಾಲೆಯ ಆವರಣಕ್ಕೆ ಜುಲೈ 19ರಂದು ಸ್ಥಳಾಂತರಗೊಳಿಸಿತು.



ಎಸ್.ಕೆ.ಇ.ಎಸ್. ಶಾಲೆಯ ಕಟ್ಟಡದಲ್ಲಿ ವಿಜಯ ಬ್ಯಾಂಕ್‌ನ ಶಾಖೆಯನ್ನು ಮೈಸೂರು ಅಸೋಸಿಯೇಶನ್‌ನ ಅಧ್ಯಕ್ಷರಾದ ಎಸ್. ದೊರೆಸ್ವಾಮಿಯವರು ದೀಪ ಪ್ರಜ್ವಲಿಸಿ ಉದ್ಘಾಟಿಸುತ್ತಿರುವುದು.

ಮುಖ್ಯ ಅತಿಥಿ ಮೈಸೂರು ಅಸೋಸಿಯೇಶನ್‌ನ ಅಧ್ಯಕ್ಷರು ಹಾಗೂ ಸೆಂಟ್ರ ಬ್ಯಾಂಕ್ ಆಫ್ ಇಂಡಿಯಾದ ನಿಕಟಪೂರ್ವ ಚೇರ್‌ಮ್ಯಾನ್ ಎಸ್. ದೊರೆಸ್ವಾಮಿಯವರು ರಿಬ್ಬನ್ ಕತ್ತರಿಸಿ, ದೀಪ ಪ್ರಜ್ವಲಿಸಿ ಹೊಸ ಕಚೇರಿಯನ್ನು ಉದ್ಘಾಟಿಸಿದರು.

ಬ್ಯಾಂಕ್ ರಾಷ್ಟ್ರೀಯ ಕನ್ನಡ ಶಾಲೆಯೊಂದಿಗೆ ಉತ್ತಮ ಬಾಂಧವ್ಯವನ್ನು ಉಳಿಸಿಕೊಂಡು ಬೆಳೆಸಿಕೊಂಡು ಬರಲಿ ಹಾಗೂ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಗ್ರಾಹಕರಿಗೆ ಕೊಟ್ಟು ಸಹಕರಿಸುವುದರೊಂದಿಗೆ ಬ್ಯಾಂಕ್ ಹೆಚ್ಚಿನ ಅಭಿವೃದ್ಧಿಯನ್ನು ಹೊಂದಲಿ ಎಂದರು ಅವರು ಹಾರೈಸಿದರು.

ಶಾಲಾ ಕಾರ್ಯದರ್ಶಿಗಳಾದ ಎಸ್. ಸುಬ್ರಮಣಿಯಂವರು ಮಾತನಾಡುತ್ತಾ ಕನ್ನಡ ನಾಡಲ್ಲಿ ಹುಟ್ಟಿ ಬೆಳೆದ ಕನ್ನಡದ ಬ್ಯಾಂಕೊಂದು ತನ್ನ ಕಂಪನ್ನು ಪಸರಿಸುತ್ತಾ ಮುಂಬೈ ಮಹಾನಗರಿಗೆ ಅದರಲ್ಲೂ ರಾಷ್ಟ್ರೀಯ ಕನ್ನಡ ಶಾಲೆಯ ಆವರಣಕ್ಕೆ ಬಂದಿರುವುದಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತಾ ಬ್ಯಾಂಕಿಗೆ ಯಶಸ್ಸನ್ನು ಕೋರಿದರು.

ವಡಾಲದ ವಿಜಯ ಬ್ಯಾಂಕಿನ ಪ್ರಬಂಧಕರಾದ ಕೆ. ಜಗದೀಶ ಶೆಟ್ಟಿಯವರ ಮುಂದಾಳತ್ವದಲ್ಲಿ ಅಂದು ಮುಂಜಾನೆ ಕ್ರಮವಾಗಿ ಗಣಹೋಮ, ವಾಸ್ತುಹೋಮ ಹಾಗೂ ಲಕ್ಷ್ಮೀ ಪೂಜೆಗಳು ಸಾಂಗವಾಗಿ ಜರುಗಿ ತದನಂತರ ಜರುಗಿದ ಉದ್ಘಾಟನಾ ಸಮಾರಂಭದ ತರುವಾದ ನಡೆ ಸಭಾ ಕಾರ್ಯಕ್ರಮದಲ್ಲಿ ವಿಜಯಾಬ್ಯಾಂಕಿನ ಮುಂಬೈ ವಿಭಾಗದ ಮಹಾಪ್ರಬಂಧಕರಾದ ಎಚ್.ರತ್ನಾಕರ ಹೆಗ್ಡೆ, ಶಾಲಾ ಕಾರ್ಯಕಾರಿ ಸಮಿತಿ ಕೋಶಾಧಿಕಾರಿ ಕೆ.ಎನ್. ಕೀರ್ತಿ, ಉಪಾಧ್ಯಕ್ಷ ಪಿ.ಕೆ. ಸಾಲ್ಯಾನ್ ಹಾಗೂ ಮೈಸೂರು ಅಸೋಸಿಯೇಶನ್‌ನ ಕಾರ್ಯದರ್ಶಿ ಎಮ್.ಎ.ಎನ್. ಪ್ರಸಾದ್‌ರವರು ಅತಿಥಿಗಳಾಗಿ ಉಪಸ್ಥಿತರಿದ್ದು ಸಮಯೋಚಿತವಾಗಿ ಮಾತನಾಡುತ್ತಾ, ಬ್ಯಾಂಕ್ ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಲೆಂದು ಹಾರೈಸಿದರು.

ವರದಿ : ಪ್ರಕಾಶ್ಚಂದ್ರ ಎಂ.ಆರ್

### ವಡಾಲಾದ ರಾಷ್ಟ್ರೀಯ ಕನ್ನಡ ಶಾಲೆಗೆ ಪೋಷಕರಿಂದ ಪುಸ್ತಕಗಳ ದೇಣಿಗೆ ಭಾಷೆ ಬೆಳೆಯಲು ಓದುವ ಹವ್ಯಾಸ ಅವಶ್ಯಕ - ಜಿ.ವಿ. ಕುಲಕರ್ಣಿ

ಯಾವುದೇ ಭಾಷೆ ಬೆಳೆಯಲು ಓದುವ ಹವ್ಯಾಸವನ್ನು ಬೆಳೆಸಿಕೊಂಡ ವ್ಯಕ್ತಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾಗ ಇದು ಸಾಧ್ಯವಾಗುತ್ತದೆ. ನಾವು ಭಾಷೆಯ ಬಗ್ಗೆ ಅಭಿಮಾನವನ್ನು ಪಡುವುದರೊಂದಿಗೆ ಪುಸ್ತಕಗಳನ್ನು ಖರೀದಿಸಿ ಓದಿದಾಗ ಲೇಖಕನ ಶ್ರಮ ಸಾರ್ಥಕವಾಗುತ್ತದೆ ಎಂದು ಪ್ರಸಿದ್ಧ ಲೇಖಕರೂ ಅಂಧೇರಿಯ ಎಂ.ವಿ. ಎಲ್. ಯು. (M.V.L.U.) ಕಾಲೇಜಿನ ಮಾಜಿ ಕನ್ನಡ ಉಪನ್ಯಾಸಕರೂ ಹಾಗೂ ಕಾಲೇಜಿನ ಪ್ರಾಚಾರ್ಯರಾದ ಶ್ರೀ ಜಿ.ವಿ. ಕುಲಕರ್ಣಿಯವರು ತಿಳಿಸಿದರು.

ಅವರು ವಡಾಲದ ರಾಷ್ಟ್ರೀಯ ಕನ್ನಡ ಶಾಲೆಯಲ್ಲಿ ವರಕವಿ ದ.ರಾ. ಬೇಂದ್ರೆಯವರ ಜೀವನ ಮಹಾಕಾವ್ಯ ಬಿದುಂಬರ ಗಾಥೆಯ 6 ಸಂಪುಟಗಳನ್ನು ಪರಿಚಯಿಸುತ್ತಾ ಕನ್ನಡಿಗರಿಗೆ ಹಾಗೂ ಕನ್ನಡ ಅಧ್ಯಾಪಕರಿಗೆ ಈ ಸಂಪುಟ



ಶಾಲಾ ಮುಖ್ಯೋಪಾಧ್ಯಾಯಿನಿ ಸರೋಜಾರಾವ್ ದ.ರಾ. ಬೇಂದ್ರೆಯವರ ಕವಿತೆಗಳ ಬಗ್ಗೆ ಮಾಹಿತಿ ನೀಡುತ್ತಿರುವುದು.

ಉಪಯುಕ್ತತೆಯ ಬಗ್ಗೆ ಸೋದಾಹರಣವಾಗಿ ತಿಳಿಸಿದರು.

ರಾವ್‌ರವರು ದ.ರಾ. ಬೇಂದ್ರೆಯವರ ಕವಿತೆಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕೊಡುವ ಈ ಪುಸ್ತಕಗಳನ್ನು ಎಲ್ಲಾ ಕನ್ನಡ ಸಂಘ ಸಂಸ್ಥೆಗಳು ಹಾಗೂ ಕನ್ನಡಿಗರು ತಮ್ಮ ವಾಚನಾಲಯಕ್ಕೆ ಖರೀದಿಸಿ ಅದನ್ನು ಓದುವ ಮೂಲಕ ತಮ್ಮ ಜ್ಞಾನ ಭಂಡಾರವನ್ನು ಹೆಚ್ಚಿಸಿಕೊಳ್ಳಿ ಎಂದು ಕರೆಯಿತ್ತರು.

ಈ ಸಂದರ್ಭದಲ್ಲಿ ಅಂಬಿಕಾತನಯದತ್ತರ ಜೀವನ ಮಹಾಕಾವ್ಯ ಔದುಂಬರ ಗಾಥೆಯ ಸಂಪುಟಗಳಾದ ನಮನ, ದರ್ಶನ, ವಿಕಾಸ, ತತ್ತ್ವ ಹಾಗೂ ಸಿದ್ಧಾಂತ ಈ ಆರು ಸಂಪುಟಗಳನ್ನು ಎಲ್.ಬಿ. ಗಣಾಚಾರ್ಯ ದಂಪತಿಗಳು ತಮ್ಮ ಪುತ್ರಿ ಕಮಲಾರವರು ವಿದ್ಯಾಭ್ಯಾಸ ಪಡೆದ ಶಾಲೆಯಾದ ವಡಾಲದ ರಾಷ್ಟ್ರೀಯ ಕನ್ನಡ ಶಾಲೆಗೆ ಪ್ರೀತಿ ಹಾಗೂ ಅಭಿಮಾನದ ದ್ಯೋತಕವಾಗಿ ರೂಪಾಯಿ 2001 (ಎರಡು ಸಾವಿರ ಒಂದು) ಬೆಲೆ ಬಾಳುವ ಆರು ಸಂಪುಟಗಳನ್ನು ಶಾಲೆಗೆ ಕಾಣಿಕೆಯಾಗಿ ನೀಡಿದರು.

ಇದನ್ನು ರಾವ್‌ರವರು ಗಣಾಚಾರ್ಯರ ಪರವಾಗಿ ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸರೋಜಾರಾವ್‌ರವರಿಗೆ ಹಸ್ತಾಂತರಿಸಿದರು.

ಶಾಲಾ ಕಾರ್ಯಕಾರಿ ಸಮಿತಿಯ ಕಾರ್ಯದರ್ಶಿಗಳಾದ ಎಸ್. ಸುಬ್ರಮಣಿಯವರು ಮಾತನಾಡುತ್ತಾ ಕನ್ನಡದ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಅಭಿರುಚಿಯನ್ನು ಹೊಂದಿ ಅದನ್ನು ಇತರ ಭಾಷಿಕರಿಗೂ ಉಣಬಡಿಸಲು ಅವಿರತವಾಗಿ ಪರಿಶ್ರಮಿಸುತ್ತಿರುವ ನಮ್ಮ ಶಾಲೆಗೆ ಉದಾರಿ ಪೋಷಕರು ಇದೇ ರೀತಿಯಲ್ಲಿ ಪುಸ್ತಕಗಳನ್ನು ಶಾಲೆಗೆ ನೀಡಿ ಸುಸಜ್ಜಿತವಾಗಿರುವ ನಮ್ಮ ವಾಚನಾಲಯವು ಇನ್ನೂ ಹೆಚ್ಚಿನ ಹೊಸ ಪುಸ್ತಕಗಳಿಂದ ತುಂಬಿ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಜ್ಞಾನ ದಾಹವನ್ನು ಹಿಂಗಿಸಲು ಸಹಕಾರ ನೀಡಿರಿ ಎಂದು ಪಾಲಕರಲ್ಲಿ ಮನವಿ ಮಾಡಿದರು.

## ಗುರು ಆದರ್ಶವನ್ನು ಮೈಗೂಡಿಸಿಕೊಂಡಾಗ ವ್ಯಕ್ತಿ ಪರಿಪೂರ್ಣತೆಯನ್ನು ಪಡೆಯಲು ಸಾಧ್ಯ - ವಿಶ್ವನಾಥ್ ಚಕೋಟೆ

ಮಹಾತಪಸ್ವಿ ಶ್ರೀ ಕುಮಾರ ಸ್ವಾಮೀಜಿ ಪ್ರತಿಷ್ಠಾನ ತಪೋವನ ಧಾರವಾಡ ಮುಂಬೈ ಕೇಂದ್ರ ಇವರ ಆಶ್ರಯದಲ್ಲಿ ಜುಲೈ 13 ರವಿವಾರದಂದು ಮೈಸೂರು ಅಸೋಸಿಯೇಶನ್‌ನಲ್ಲಿ ಗುರುಪೂರ್ಣಿಮಾ ಕಾರ್ಯವನ್ನು ಅದ್ದೂರಿಯಾಗಿ ಅತೀ ವಿಜೃಂಭಣೆಯಿಂದ ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಸೋಲ್ಲಾಪುರದ ಮೆಲ್ಟ್ರಾನ್ (Meltron)ನ ಚೆಯರ್‌ಮನ್ ಹಾಗೂ ಶಾಸಕರಾದ ಶ್ರೀ ವಿಶ್ವನಾಥ ಚಕೋಟೆಯವರು ದೀಪವನ್ನು ಪ್ರಜ್ವಲಿಸಿ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದರು.



ಶ್ರೀ ವಿಶ್ವನಾಥ ಚಕೋಟೆಯವರು ದೀಪವನ್ನು ಪ್ರಜ್ವಲಿಸಿ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವುದು.

ಅವರು ತಮಗಿದ್ದ ಕುಮಾರ ಸ್ವಾಮೀಜಿಯವರೊಡಗಿನ ಒಡನಾಟ ಹಾಗೂ ತನ್ನ ಅವರೊಂದಿಗಿನ ಅನುಭವಗಳನ್ನು ಹಂಚಿಕೊಳ್ಳುತ್ತಾ ತಾವು ಮೂಲತಃ ನಾಸ್ತಿಕರಾಗಿದ್ದು ಹೇಗೆ ಅವರ ಪ್ರಭಾವದಿಂದ ಆಸ್ತಿಕನಾದೆನೆಂದು ತಿಳಿಸುತ್ತಾ ಎಲ್ಲರೂ ಗುರುಗಳ ತತ್ತ್ವ ಆದರ್ಶಗಳನ್ನು ಧ್ಯೇಯ ಧೋರಣೆಗಳನ್ನು ತಮ್ಮಲ್ಲಿ ಮೈಗೂಡಿಸಿದಾಗ ಪರಿಪೂರ್ಣರಾಗಲು ಸಾಧ್ಯವಿದೆ ಎಂದು ಭಕ್ತಾಭಿಮಾನಿಗಳಿಗೆ ಮನದಟ್ಟಾಗುವಂತೆ ಅರುಹಿದರು.

ಈ ಸಂದರ್ಭದಲ್ಲಿ ಕನ್ನಡದಲ್ಲಿ ಉಪನ್ಯಾಸಕರಾಗಿ ಆಗಮಿಸಿದ ಮುಂಬೈಯ ವಿ.ವಿ.ದ ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀ ಜಿ. ಎನ್. ಉಪಾಧ್ಯ ಗುರು ಶಬ್ದದ ಉತ್ಪತ್ತಿ ಹಾಗೂ ಅದರ ಮಹತ್ವವನ್ನು ತಿಳಿಸಿದರು. ಹಿಂದಿನ ಶಿಕ್ಷಣ ಪದ್ಧತಿಗೂ ಆದಂತಹ ಬದಲಾವಣೆಯನ್ನು ತಿಳಿಸುತ್ತಾ ಪರಿಪೂರ್ಣತೆಯತ್ತ ಕೊಂಡೊಯ್ಯುವವನೇ ನಿಜವಾದ ಗುರು ಎಂದ ಅವರು ಗುರಿ ಹಾಗೂ ಗುರು ಇವೆರಡೂ ಒಟ್ಟಿಗೆ ಸೇರಿದಾಗ ಸಾಧನೆ ಸಾಧ್ಯವೆಂದು ಸೋದಹರಣವಾಗಿ ತಿಳಿಸಿದರು.

ಮರಾಠಿಯಲ್ಲಿ ಉಪನ್ಯಾಸಕಿಯಾಗಿ ಆಗಮಿಸಿದ ಲೇಖಿಕಿ ಡಾ. ಮೀನಾ ವೈಶಂಪಾಯನ ಅವರು ಮಾತನಾಡುತ್ತಾ ವ್ಯಕ್ತಿಗೆ ತಾನು ಮಾಡುವ ಯಾವುದೇ ಕೆಲಸ ಕೀಳು ಅಥವ ಮೇಲು ಎಂಬ ಭಾವನೆ ಇರಬಾರದು ಎಲ್ಲವನ್ನು ಸಮಾಭಾವದಿಂದ ತೆಗೆದುಕೊಳ್ಳಬೇಕು. ತನ್ನ ವರ್ತನೆಗೂ ತನ್ನ ಆಚರಣೆಗೂ ಸಾಮಿಪ್ಯವಿರಬೇಕು ಅದರಂತೆ ಗುಣಸ್ಥಿರವಾಗಿರಬೇಕು. ವಾರಕರಿಯವರಲ್ಲಿ ಶ್ರದ್ಧೆ ಭಕ್ತಿಯನ್ನು ಅಳವಡಿಸಿಕೊಂಡು ಗುರಿಯತ್ತ ಮುನ್ನಡೆಯುವುವರೊಂದಿಗೆ ಇತರ ಭಾಷೆಯ ಜನರೊಡನೆ ತಮ್ಮ ಸುಖ ದುಃಖಗಳನ್ನು ಹಂಚಿಕೊಂಡಾಗ ಭಾಷಾ ಭಾಂದವ್ಯ ಬೆಳೆಯಲು ಸಾಧ್ಯವಿದೆ ಎಂದ ಅವರು ಕುಮಾರ ಸ್ವಾಮೀಜಿ ಪ್ರತಿಷ್ಠಾನದವರು ನಡೆಸುತ್ತಿರುವ ಭಾಷಾ ಭಾಂದವ್ಯ ಬೆಸೆಯುವ ಈ ಕಾರ್ಯಕ್ರಮ ನಿಜವಾಗಿಯೂ ಶ್ಲಾಘನೀಯವಾದುದು ಎಂದು ತಿಳಿಸಿದರು.

ಸಭಾ ಕಾರ್ಯಕ್ರಮದ ಮೊದಲಿಗೆ ಮೈಸೂರು ಅಸೋಸಿಯೇಶನ್‌ನ ಲಲಿತಾ ಕಲಾ ವಿಭಾಗದವರಿಂದ ಕನ್ನಡದಲ್ಲಿ, ತದನಂತರ ಗಿರೀಶ್ ಸಾವರ್‌ಕರ್ ಹಾಗೂ ಮನ್ಮಥ್ ಸ್ವಾಮೀಜಿಯವರು ಹಿಂದಿಯಲ್ಲಿ ವಚನಗಳನ್ನು ಹಾಡಿ ಶ್ರೋತೃಗಳನ್ನು ಗುರುಗಳ ಸಾಮೀಪ್ಯಕ್ಕೆ ಕೊಂಡೊಯ್ದರು. ಶಿವಶಂಕರ ಲಾಥುರೇಯವರ ಪ್ರಾರ್ಥನೆಯೊಂದಿಗೆ ಸಭಾ ಕಾರ್ಯಕ್ರಮವು ಪ್ರಾರಂಭಗೊಂಡಿತು. ಆಗಮಿಸಿದ ಅಭ್ಯಾಗತರನ್ನು ಪ್ರತಿಷ್ಠಾನ ವಿಶ್ವಸ್ಥರಾದ (ಟ್ರಸ್ಟಿಗಳಾದ) ಶ್ರೀ ಮಧುಸೂದನ ಲಿಂಗೆ ಸ್ವಾಗತಿಸಿದರೆ ಕನ್ನಡ ಹಾಗೂ ಮರಾಠಿ ಉಪನ್ಯಾಸಕರನ್ನು ಕ್ರಮವಾಗಿ ಪ್ರಕಾಶ್ಚಂದ್ರ




ಮೈಸೂರು ಅಸೋಸಿಯೇಶನ್ ಲಲಿತ ಕಲಾವಿಭಾಗದವರು ವಚನಗಳನ್ನು ಹಾಡುತ್ತಿರುವುದು.

ಎಂ. ಆರ್. ಹಾಗೂ ಶೀತಲ್ ಮೋರೆ ಪರಿಚಯಿಸಿದರು. ಶ್ರೀಮತಿ ಅರ್ಪಣ ಮೋಕಲ್ ಕಾರ್ಯಕ್ರಮ ನಿರ್ವಹಿಸಿದರೆ ಶ್ರೀ ಎಸ್. ಸುಬ್ರಮಣಿಯವರು ಗುರುಗಳ ಜೀವನ ಚರಿತ್ರೆಯ ಸಂಪೂರ್ಣ ಸುದೀರ್ಘ ಪರಿಚಯವನ್ನು ನೀಡಿ ಕೊನೆಯಲ್ಲಿ ಧನ್ಯವಾದವನ್ನಿತ್ತರು. ನೆರೆದಿದ್ದ ಭಕ್ತಾಭಿಮಾನಿಗಳು ಪ್ರಸಾದ ಸ್ವೀಕರಿಸಿ ಗುರುವಿನ ಕೃಪೆಗೆ ಪಾತ್ರರಾದರು.

Regn. No. 040155/83
Regn. No. TECH/47-202/MBI-2002
Date of Posting : 10-8-2003

## ಅಗಲಿಕೆ



ಕನ್ನಡ ಖ್ಯಾತ ವಿಮರ್ಶಕ ಪ್ರೊ. ಕೀರ್ತಿನಾಥ ಕುರ್ತುಕೋಟಿ ಅವರು ೨೧ರಂದು ಧಾರವಾಡದಲ್ಲಿ ನಿಧನರಾದರು. ಅವರಿಗೆ ೭೫ ವರ್ಷಗಳಾಗಿದ್ದವು. ಇವರ ಪತ್ನಿ ಸರಸ್ವತಿ ಕುರ್ತುಕೋಟಿ ಅವರ ನಿಧನದ ಕೆಲವೇ ಘಂಟೆಗಳ ಅಂತರದಲ್ಲಿ ಈ ಘಟನೆಯು ಸಂಭವಿಸಿತು.

ಪ್ರೊ. ಕೀರ್ತಿನಾಥ ಕುರ್ತುಕೋಟಿ ೧೯೨೮ರ ಅಕ್ಟೋಬರ್ ೨೧ರಂದು ಗದಗಿನಲ್ಲಿ ಹುಟ್ಟಿದರು. ೧೯೫೦ರಲ್ಲಿ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಪದವಿ ಮುಗಿಸಿದರು. ೫೦-೫೫ರ ನಡುವೆ ಗದಗಿನ ವಿದ್ಯಾದಾನ ಸಮಿತಿ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಆರಂಭಿಸಿದರು. ಆನಂತರ ಒಂದು ವರ್ಷ ಬೆಳಗಾವಿಯ ಆರ್‌ಪಿಡಿ ಕಾಲೇಜಿನಲ್ಲಿ ಟ್ಯೂಟರ್ ಆಗಿದ್ದರು. ೧೯೫೭-೫೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದರು.

ಅನಂತರ ಮನೋಹರ ಗ್ರಂಥಮಾಲೆಯ ಸಾಹಿತ್ಯ ಸಲಹೆಗಾರರಾಗಿ ಸಾಹಿತ್ಯ ಕೃಷಿ ಆರಂಭಿಸಿದ ಕುರ್ತುಕೋಟಿ, 'ಜಡಭರತ' ಎಂದೇ ಖ್ಯಾತರಾಗಿದ್ದ ಜಿ.ಬಿ. ಜೋಶಿ ಜತೆಗೂಡಿ ''ನಡೆದು ಬಂದ ದಾರಿ'' ಸಂಪುಟಗಳನ್ನು ಸಂಪಾದಿಸಿದರು. ೧೯೫೮ರಲ್ಲಿ ಪುಣೆಯ ಪರಶುರಾಂ ಭಾವು ಕಾಲೇಜಿನ ಇಂಗ್ಲಿಷ್ ಅಧ್ಯಾಪಕರಾದರು. ೧೯೫೮ರಿಂದ ೬೭ರ ವರೆಗೆ ವಲ್ಲಭ ವಿದ್ಯಾನಗರ ವಿಠಲಭಾಯಿ ಪಟೇಲ್ ಮಹಾವಿದ್ಯಾಲಯದಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿದ್ದರು.

೬೭ರಿಂದ ನಿವೃತ್ತಿವರೆಗೂ ಸರ್ದಾರ್ ಪಟೇಲ್ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿ ೮೮ರಲ್ಲಿ ಧಾರವಾಡಕ್ಕೆ ಬಂದು ನೆಲೆಸಿದರು. 'ಆಮನಿ', 'ಚಂದ್ರಗುಪ್ತ', 'ಸ್ವಪ್ನದರ್ಶಿ' ಮತ್ತು ಇತರ ಗೀತ ನಾಟಕಗಳನ್ನು ಕುರ್ತುಕೋಟಿ ಬರೆದಿದ್ದಾರೆ. 'ಆಮನಿ' ಹಿಂದಿ ಭಾಷಾಂತರ 'ವೋ ಘರ್' ದೆಹಲಿ ದೂರದರ್ಶನದಲ್ಲಿ ಗಿರೀಶ ಕಾರ್ನಾಡರ ನಿರ್ದೇಶನದಲ್ಲಿ ಪ್ರಸಾರವಾಗಿದೆ.

ಅಂಕಣ ಲೇಖನಗಳ ಸಂಕಲನ ''ಉರಿಯ ನಾಲಗೆ'' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಈಚೆಗಷ್ಟೇ ಕುರ್ತುಕೋಟಿ ಅವರಿಗೆ ದ.ರಾ. ಬೇಂದ್ರೆ ಸಾಹಿತ್ಯ ಪ್ರಶಸ್ತಿ ಸಿಕ್ಕಿದೆ. ಇವರ ಕೃತಿಗಳಿಗೆ ಮುಂಬೈ ಸರ್ಕಾರದ ಬಹುಮಾನ, ವಿಮರ್ಶಾಕ್ಷೇತ್ರದ ಸಾಧನೆಗಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಫೆಲೋಶಿಪ್, ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆ ಫೆಲೋಶಿಪ್ ಸೇರಿದಂತೆ ಲೆಕ್ಕವಿಲ್ಲದಷ್ಟು ಬಹುಮಾನ ಪ್ರಶಸ್ತಿಗಳು ಕುರ್ತುಕೋಟಿ ಅವರನ್ನು ಹುಡುಕಿಕೊಂಡು ಬಂದಿವೆ.

''ಬೇಂದ್ರೆ ಹಾಗೂ ಕನ್ನಡ ಕಾವ್ಯ ಸ್ವರೂಪ'', ''ಯುಗಧರ್ಮ ಹಾಗೂ ಸಾಹಿತ್ಯ ದರ್ಶನ'', ''ನವ್ಯ ಕಾವ್ಯ ಪ್ರಯೋಗ'', ''ಭೃಂಗದ ಬೆನ್ನೇರಿ'', ''ಕನ್ನಡ ಸಾಹಿತ್ಯ ಸಂಗಾತಿ'', ''ನೂರು ಮರ ನೂರು ಸ್ವರ'' ಸೇರಿದಂತೆ ಹಲವಾರು ವಿಮರ್ಶಾ ಕೃತಿಗಳನ್ನು ಕುರ್ತುಕೋಟಿ ಕನ್ನಡ ಸಾಹಿತ್ಯ ಲೋಕಕ್ಕೆ ಸಮರ್ಪಿಸಿದ್ದಾರೆ. ''ನಡೆದು ಬಂದ ದಾರಿ'', ''ಪುಟ ಬಂಗಾರ'', ''ವಾಸುದೇವ ಪ್ರಶಸ್ತಿ'', ''ವಿಶ್ವವ್ಯಾಪಿ ಗಣೇಶ'', ''ಹಜ್ಜೇನು'' ಸೇರಿದಂತೆ ಅನೇಕ ಕೃತಿಗಳನ್ನು ಸಂಪಾದಿಸಿದ್ದಾರೆ.

೧೯೮೬ರಲ್ಲಿ ಅಸೋಸಿಯೇಷನ್ನಿನ ಬಂಗಾರ ಹಬ್ಬದ ದತ್ತಿ ಉಪನ್ಯಾಸ ಮಾಲೆಯಲ್ಲಿ ''ಬೇಂದ್ರೆಯವರ ಕಾವ್ಯಮುಖಿಗಳು'' ಎಂಬ ಉಪನ್ಯಾಸಗಳನ್ನಿತ್ತ ಶ್ರೀ ಕುರ್ತುಕೋಟಿಯವರ ಪರಿಚಯ ನಮ್ಮ ಅನೇಕ ಸದಸ್ಯರಿಗಿದೆ. ಸದಸ್ಯರು ಇಂದಿಗೂ ಅವರ ಈ ಉಪನ್ಯಾಸಗಳನ್ನು ಸ್ಮರಿಸುತ್ತಾರೆ.

ಕುರ್ತುಕೋಟಿ ನಿಧನದಿಂದಾಗಿ ಕನ್ನಡ ಸಾಹಿತ್ಯದ ಮತ್ತೊಂದು ಪ್ರಮುಖ ಅಧ್ಯಾಯ ಕೊನೆಗೊಂಡಂತಾಗಿದೆ. ಅವರ ಕುಟುಂಬದವರಿಗೆ ಈ ದುಃಖವನ್ನು ಸಹಿಸುವ ಶಕ್ತಿ ಒದಗಲಿ ಎಂದು ನೇಸರು ಪ್ರಾರ್ಥಿಸುತ್ತದೆ.

## ಭಾರತೀಯ ಕಲೆ

(ಪುಟ ೮ರಿಂದ)

ದೇವಿಯು ಮಹಿಷಾಸುರನನ್ನು ಸಂಹರಿಸುವುದನ್ನು ಈ ಉಬ್ಬು ಚಿತ್ರದಲ್ಲಿ ಸುಂದರವಾಗಿ ಮೂಡಿಸಲಾಗಿದೆ. ಅದೇ ತಾನೇ ದುರ್ಗಾ ದೇವಿಯು ಮಹಿಷಾಸುರನಿಗೆ ಮೂರು ಬಾಣಗಳನ್ನು ಬಿಟ್ಟಿರುವುದನ್ನು ತುಂಬಾ ಜಾಣ್ಮೆಯಿಂದ ಪ್ರಕಟಿಸಲಾಗಿದೆ.

ನಾದಾಂತ ರೀತಿಯಲ್ಲಿ ಶಿವನ ನೃತ್ಯವನ್ನು ಲಂಕೇಶ್ವರ ಗುಹೆಯಲ್ಲಿ ಇರುವ ಮೂರ್ತಿಶಿಲ್ಪದಲ್ಲಿ ಕೆತ್ತಲಾಗಿದೆ. ಈ ಶಿಲಾ ಫಲಕವು ಸಾಕಷ್ಟು ಶಿಥಿಲವಾಗಿದ್ದರೂ ಮುಖ್ಯ ಆಕೃತಿಯು ಸಂಪೂರ್ಣವಾಗಿ ಉಳಿದುಕೊಂಡಿದೆ. ಎಡಗಾಲನ್ನು ಪೂರ್ಣವಾಗಿ ಊರಿ ಬಲಗಾಲಿನ ಆಧರದ ಮೇಲೆ ಶರೀರವನ್ನು ಪೂರ್ಣವಾಗಿ ತಿರುಗಿಸಿದಂತಹ ಅಪೂರ್ವವಾದ ನೃತ್ಯ ಭಂಗಿಯನ್ನು ಇಲ್ಲಿ ಕಾಣುತ್ತೇವೆ. ಇದು ಅತಿ ಭಂಗ ನೃತ್ಯ ಶೈಲಿಯಾಗಿದ್ದಾಗಿದೆ. ಶರೀರದ ಪ್ರತಿಯೊಂದು ಅಂಗವು ನಾಟ್ಯ ಭಂಗಿಯಲ್ಲಿದ್ದು, ಅದರ ವಕ್ರತೆಯಿಂದಾಗಿ ಚಲನೆಗೆ ಸೊಬಗನ್ನು ತಂದಿರುವುದಲ್ಲದೆ, ಶಿವನು ನಾಟ್ಯ ಸಾರ್ವಭೌಮ ಎಂಬುದನ್ನು ಎತ್ತಿ ತೋರಿಸುವಂತಿದೆ.

ಎಲ್ಲೋರಾದಲ್ಲಿ ಅಸಂಖ್ಯಾತ ಮೂರ್ತಿ ಶಿಲ್ಪಗಳನ್ನು ಪ್ರತಿಯೊಂದು ಗೋಡೆಯಲ್ಲೂ ಕಾಣುತ್ತೇವೆ. ರಾವಣ ಕಾಖೈ, ರಾಮೇಶ್ವರ, ಧುಮರ್ಲೇನ ಮತ್ತು ದಶವತಾರ ಗುಹೆಗಳಲ್ಲಿಯೂ ನೂರಾರು ಮೂರ್ತಿಶಿಲ್ಪಗಳನ್ನು ಕಡೆದಿದ್ದಾರೆ. ದಶಾವತಾರದ ಗುಹೆಯಲ್ಲಿ ವಿಷ್ಣುವಿನ ಅವತಾರಗಳನ್ನು ಕೊರೆದಿದ್ದರೂ ಇದಕ್ಕೂ ಮುಂಚೆ, ಅಲ್ಲಿ ಬುದ್ಧನ ಮೂರ್ತಿಶಿಲ್ಪಗಳು ವಿಷ್ಣುವಿನ ಅವತಾರಗಳನ್ನು ಕೊರೆದಿದ್ದರೂ ಇದಕ್ಕೂ ಮುಂಚೆ, ಅಲ್ಲಿ ಬುದ್ಧನ ಮೂರ್ತಿಶಿಲ್ಪಗಳು ಇದ್ದಿರಬಹುದೆಂದು ಅಭಿಪ್ರಾಯ ಪಡಲಾಗಿದೆ. ರಾಷ್ಟ್ರಕೂಟರು, ಕಟ್ಟಾ, ಶೈವಾನುಯಾಯಿಗಳಾದುದರಿಂದ ಇಲ್ಲಿ ಶಿವನ ವಿಗ್ರಹಗಳ ರಚನೆಗೆ ಹೆಚ್ಚು ಆದ್ಯತೆ ನೀಡಲಾಗಿದೆ. ರಾವಣ ಕಾಖೈ ದೇವಾಲಯದಲ್ಲಿ, ಶಿವನ ನಾಟ್ಯವನ್ನು ಲಲಿತ ಭಂಗಿಯಲ್ಲಿ ಕಾಣುತ್ತೇವೆ. ಶಿವನು ತನ್ನ ಎಂಟು ಕೈಗಳಲ್ಲಿಯೂ ಸಂಗೀತೋಪಕರಣಗಳು ಮತ್ತು ಆಯುಧಗಳನ್ನು ಹಿಡಿದಿದ್ದಾನೆ. ದಶಾವತಾರ ದೇವಲಾಯದಲ್ಲಿ ನರಸಿಂಹ ದೇವರ ಫಲಕವನ್ನು ಕೆತ್ತಲಾಗಿದೆ. ಇಲ್ಲಿ ನರಸಿಂಹನ ಆಕಾರವನ್ನು ಕಂಡ ಹಿರಣ್ಯಕಶಪು ಭಯಭೀತನಾಗಿರುವುದು ಬಹಳ ಸುಂದರನಾಗಿ ಮೂಡಿಬಂದಿದೆ ಹಾಗೂ ನರಸಿಂಹನು ಕಂಬದಿಂದ ದಿಢೀರನೆ ಹೊರಬಂದಾಗ, ದಿಗ್ಭ್ರಾಂತನಾದ ಹಿರಣ್ಯಕಸಿಪುವಿನ ಭಂಗಿ, ನಾಟಕೀಯತೆಯನ್ನುಂಟು ಮಾಡುವಂತೆ ಅದ್ಭುತವಾಗಿ ಕಲಾವಿದ ತನ್ನ ಪ್ರಾವೀಣ್ಯತೆಯನ್ನು ಪ್ರದರ್ಶಿಸಿದ್ದಾನೆ.

ರಾಮೇಶ್ವರ ಅಥವಾ ಕಾಣಬರುವ ಮೂರ್ತಿಶಿಲ್ಪಗಳಲ್ಲಿ ಸಪ್ತಮಾತೃಕೆಯ ಶಿಲ್ಪವು ಅತ್ಯುತ್ತಮವಾದದ್ದು. ಈ ಸಪ್ತಮಾತೃಕೆಯ ನೀಳವಾದ ಕೈಕಾಲುಗಳು, ತೆಳುವಾದ ಶರೀರ ಸೊಗಸಾಗಿ ಮೂಡಿಬಂದಿದೆ.

ಧುಮರ್ಲೇನಾ ಅಥವಾ ಸೀತಾನಾನಿ ಗುಹೆಯಲ್ಲಿ ಅಂಧಕಾಸುರವಧಾ ಮೂರ್ತಿ ಶಿಲ್ಪ ಫಲಕವನ್ನು ಕೆತ್ತಲಾಗಿದೆ. ಶಿವನ ತೆರೆದ ಬಾಯಿ, ಬಿಳುಪಾದ ಹಲ್ಲುಗಳು ಮತ್ತು ಹರಿತ ನೋಟ ಕೊಲ್ಲುವ ಇಂಗಿತವನ್ನು ತೋರಿಸುತ್ತದೆ. ಅಂಧಕಾಸುರನ ಎದೆಗೆ ಚುಚ್ಚಿದ ಶಿವನ ಖಡ್ಗವು, ಅವನ ಬೆನ್ನಿನಿಂದ ಹೊರಬಂದಿರುವುದನ್ನು ಬಹಳ ನೈಜವಾಗಿ ಚಿತ್ರಿಸಿದೆ. ಶಿವನ ಉಗ್ರತೆಯನ್ನು ಕಂಡ ಪಾರ್ವತಿ ಭಯಭೀತಳಾಗಿ ಒಂದು ಕಡೆ ನಿಂತಿರುವಂತಿದೆ.

(ಮುಂದುವರಿದಿದೆ)

Edited, Printed & Published by M.A.N. Prasad, On behalf of the Mysore Association, Mumbai. Tel.: 2402 4647
Printed at Aarati Art Printers, Fort, Mumbai-400 001. * 2266 3361 / 2266 5938